ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

22 ಮಾರ್ಚ್ 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 11 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಮೈಕಾ ಹಮಾನೊ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಜಪಾನ್ ಮಹಿಳೆಯರ ಫುಟ್‌ಬಾಲ್ ತಂಡವು ಶನಿವಾರ ಆಸ್ಟ್ರೇಲಿಯಾ ತಂಡವನ್ನು 1-0ಯಿಂದ ಮಣಿಸಿ ಮೂರನೇ ಬಾರಿ ಎಎಫ್‌ಸಿ ಏಷ್ಯನ್ ಕಪ್ ಪ್ರಶಸ್ತಿ ಗೆದ್ದುಕೊಂಡಿತು.



ಆದ್ಯ ವಚನಕಾರ ದೇವರ ದಾಸಿಮಯ್ಯ » 2


30 ದಿನಗಳ ಕಾಲ ನಿರ್ಬಂಧ ಸಡಿಲಿಕೆ ಘೋಷಣೆ » 3


ಕಾಫಿ ಬೆಳೆ ಉಳಿವಿಗೆ ತುಂತುರು ನೀರಾವರಿಗೆ ಮೊರೆ » 4


# ವಾಣಿಜ್ಯ ಬಳಕೆ ಸಿಲಿಂಡರ್ ಮಿತಿ ಹೆಚ್ಚಳ

## ಹೆಚ್ಚುವರಿಯಾಗಿ ಶೇ.20ರಷ್ಟು ಹಂಚಿಕೆಗೆ ಕೇಂದ್ರ ನಿರ್ಧಾರ | ನಾಳೆಯಿಂದಲೇ ಆದೇಶ ಜಾರಿ

• ಪ್ರಜೋದಯ ವರದಿ



**ನವದೆಹಲಿ:** ಸಿಲಿಂಡರ್‌ಗಳಿಲ್ಲದೆ ಪರದಾಡುತ್ತಿದ್ದ ಹೋಟೆಲ್ ಮತ್ತು ರೆಸ್ಟೋರೆಂಟ್ ಮಾಲೀಕರಿಗೆ ಕೇಂದ್ರ ಸರ್ಕಾರ ಶನಿವಾರ ಶುಭಸುದ್ದಿ ನೀಡಿ, ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಹಂಚಿಕೆಯನ್ನು ಶೇ.50ಕ್ಕೆ ಹೆಚ್ಚಿಸಿದೆ.

ಕಳೆದ ಮೂರು ವಾರಗಳಿಂದ ನಡೆಯುತ್ತಿರುವ ಪಶ್ಚಿಮ ಏಷ್ಯಾ ಯುದ್ಧದಿಂದ ಭಾರತಕ್ಕೆ ಇಂಧನ ಸರಬರಾಜಿನಲ್ಲಿ ವ್ಯತ್ಯವಾಗಿದೆ. ಅದರಿಂದಾಗಿ ಮನೆಗಳಿಗೆ ಎಲ್‌ಪಿಜಿ ಸರಬರಾಜು ಮಾಡಲು ಆದ್ಯತೆ ನೀಡಲು ಹೋಟೆಲ್‌ಗಳಂತಹ ವಾಣಿಜ್ಯ ಸಂಸ್ಥೆಗಳಿಗೆ ಎಲ್‌ಪಿಜಿ ಸರಬರಾಜಿನಲ್ಲಿ ಕಡಿತ ಮಾಡಲಾಗಿತ್ತು. ಇದೀಗ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಗಳಿಗೆ ರಾಜ್ಯಗಳಿಗೆ ಹೆಚ್ಚುವರಿಯಾಗಿ ಶೇ.20ರಷ್ಟು ಅನಿಲ ಹಂಚಿಕೆ ಮಾಡಲು ನಿರ್ಧರಿಸಲಾಗಿದ್ದು, ಅದರಿಂದ ಒಟ್ಟು ಹಂಚಿಕೆ ಪ್ರಮಾಣ ಶೇ.50ಕ್ಕೆ ತಲುಪಲಿದೆ.

ಮಾರ್ಚ್ 23 (ಸೋಮವಾರ) ಜಾರಿಗೆ ಬರುವಂತೆ ಹೆಚ್ಚುವರಿಯಾಗಿ ಶೇ.20ರಷ್ಟು ವಾಣಿಜ್ಯ ಬಳಕೆ ಎಲ್‌ಪಿಜಿ ಹಂಚಿಕೆ ಮಾಡಲಾಗುವುದು. ಮುಂದಿನ ಆದೇಶದವರೆಗೆ ಈ ವ್ಯವಸ್ಥೆ ಜಾರಿಯಲ್ಲಿರುತ್ತದೆಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಿಳಿಸಿದೆ.

ಈ ಹೆಚ್ಚುವರಿ ಅನಿಲವನ್ನು ಪ್ರಮುಖವಾಗಿ ರೆಸ್ಟೋರೆಂಟ್, ಡಾಬಾ, ಹೋಟೆಲ್, ಕೈಗಾರಿಕಾ ಕ್ಯಾಂಟೀನ್, ಆಹಾರ ಸಂಸ್ಕರಣೆ ಮತ್ತು ಡೇರಿ ಕ್ಷೇತ್ರಗಳಿಗೆ ಆದ್ಯತೆಯ ಮೇಲೆ ನೀಡಲು ಸೂಚಿಸಲಾಗಿದೆ. ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳು ನಡೆಸುವ ಸಬ್ಸಿಡಿ ಊಟದ ಕೇಂದ್ರಗಳು ಮತ್ತು ಸಮುದಾಯ ಅಡುಗೆ ಮನೆಗಳಿಗೆ ತಡೆರಹಿತ ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೆಟ್ರೋಲಿಯಂ ಇಲಾಖೆ ಕಾರ್ಯದರ್ಶಿ ರಾಜ್ಯಗಳಿಗೆ ಪತ್ರ ಬರೆದಿದ್ದಾರೆ.

ಮನೆಗಳಿಗೆ ಎಲ್‌ಪಿಜಿ ಪೂರೈಕೆ ಸ್ಥಿರವಾಗಿದೆ ಎಂದು ಅಧಿಕೃತ ಹೇಳಿಕೆ ತಿಳಿಸಿದ್ದು, ವಿತರಕರಲ್ಲಿ ಯಾವುದೇ ಕೊರತೆ ಇಲ್ಲ ಮತ್ತು ಸಾಮಾನ್ಯ ವಿತರಣಾ ಕಾರ್ಯಾಚರಣೆಗಳು ಮುಂದುವರೆದಿವೆ. ಆತಂಕದಿಂದ ಗ್ಯಾಸ್ ಬುಕಿಂಗ್‌ಗಳು ಕಡಿಮೆಯಾಗಿವೆ ಮತ್ತು ನಾಗರಿಕರು ಜನದಟ್ಟಣೆಯನ್ನು ತಪ್ಪಿಸಲು ಮತ್ತು ಮನೆ ವಿತರಣೆಯನ್ನು ಅವಲಂಬಿಸುವಂತೆ ಸೂಚಿಸಲಾಗಿದೆ.

ವಲಸೆ ಕಾರ್ಮಿಕರ ಹಿತದೃಷ್ಟಿಯಿಂದ ಅವರಿಗೆ 5 ಕೆಜಿ ಸಣ್ಣ ಸಿಲಿಂಡರ್ ಒದಗಿಸುವ ವಿಶೇಷ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ಹೆಚ್ಚುವರಿ ಅನುದಾನವು ಕೇವಲ ನಿಗದಿಪಡಿಸಿದ ವಲಯಗಳಿಗೆ ತಲುಪುವಂತೆ ನೋಡಿಕೊಳ್ಳಲು ಮತ್ತು ಕಾಳಸಂತೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೆಂದು ಪೆಟ್ರೋಲಿಯಂ ಇಲಾಖೆ ಕಾರ್ಯದರ್ಶಿಗಳು ತಿಳಿಸಿದ್ದಾರೆ.

**ಆದೇಶ ಸ್ವಾಗತಿಸಿದ ಅಸೋಸಿಯೇಷನ್**

ಹೋಟೆಲ್‌ಗಳಿಗೆ ಕೇಂದ್ರದಿಂದ ಶೇ.20 ರಷ್ಟು ಹೆಚ್ಚುವರಿ ಗ್ಯಾಸ್ ಸಿಲಿಂಡರ್‌ಗೆ ಆದೇಶ ಹಿನ್ನಲೆ ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್ ಸ್ವಾಗತಿಸಿದೆ. ಒಟ್ಟು ಶೇ.50 ರಷ್ಟು ವಾಣಿಜ್ಯ ಸಿಲಿಂಡರ್ ಸಿಗಲಿದೆ. ಸೋಮವಾರದಿಂದ ಹೋಟೆಲ್‌ಗಳು ಚೇತರಿಸಿಕೊಳ್ಳಲಿವೆ. ಸ್ವಲ್ಪ ಮಟ್ಟಿಗೆ ಪರಿಹಾರ ಸಿಕ್ಕಹಾಗೆ ಆಗಿದೆ. ಮುಚ್ಚಿದ್ದ ಹೋಟೆಲ್‌ಗಳು ತೆರೆಯಲಿವೆ ಹೋಟೆಲ್‌ನ ಒಂದೊಂದೇ ಮೆನುಗಳು ಆರಂಭವಾಗಲಿವೆ ಎಂದು ಅಸೋಸಿಯೇಷನ್ ಗೌರವಾಧ್ಯಕ್ಷ ಪಿ.ಸಿ.ರಾವ್ ತಿಳಿಸಿದ್ದಾರೆ.

### ಇರಾನ್ ಮೇಲಿನ ದಾಳಿ ಖಂಡಿಸಿದ ಮೋದಿ



ಅಮೆರಿಕಾ ಹಾಗು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸಿದ ಭೀಕರ ವೈಮಾನಿಕ ದಾಳಿಯ ಬಗ್ಗೆ ಕೊನೆಗೂ ಮೌನ ಮುರಿದಿರುವ ಪ್ರಧಾನಿ ನರೇಂದ್ರ ಅವರು, ರಂಜಾನ್ ಹಬ್ಬದಂದು ಇರಾನ್ ಮೇಲಿನ ದಾಳಿಯನ್ನು ಖಂಡಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಇರಾನ್ ಅಧ್ಯಕ್ಷ ಡಾ.ಮಸೂದ್ ಪೆಜೆಶ್ಕಿಯಾನ್ ಅವರೊಂದಿಗೆ ಮಾತನಾಡಿ, ಈದ್ ಮತ್ತು ನೌರುಜ್ ಶುಭಾಶಯ ತಿಳಿಸಿದ್ದೇವೆ. ಪ್ರಾದೇಶಿಕ ಸ್ಥಿರತೆಗೆ ಬೆದರಿಕೆ ಹಾಕುವ ಮತ್ತು ಜಾಗತಿಕ ಪೂರೈಕೆ ಸರಪಳಿಗೆ ಅಡ್ಡಿಪಡಿಸುವ ಈ ಪ್ರದೇಶದಲ್ಲಿನ ನಿರ್ಣಾಯಕ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು ಖಂಡಿಸುತ್ತೇವೆ. ಸಂಚರಣೆ ಸ್ವಾತಂತ್ರ್ಯವನ್ನು ಕಾಪಾಡುವ ಮತ್ತು ಹಡಗು ಮಾರ್ಗಗಳು ಮುಕ್ತ ಮತ್ತು ಸುರಕ್ಷಿತವಾಗಿರುವುದನ್ನು ಖಚಿತಪಡಿಸಿಕೊಳ್ಳುವ ಮಹತ್ವವನ್ನು ಪುನರುಚ್ಚರಿಸಲಾಗಿದೆ. ಇರಾನ್‌ನಲ್ಲಿರುವ ಭಾರತೀಯ ಪ್ರಜೆಗಳ ಸುರಕ್ಷತೆ ಮತ್ತು ಭದ್ರತೆಗೆ ಇರಾನ್‌ನ ನಿರಂತರ ಬೆಂಬಲವನ್ನು ಶ್ಲಾಘಿಸಲಾಗಿದೆ ಎಂದು ಪ್ರಧಾನಿ ತಿಳಿಸಿದ್ದಾರೆ.

## ಟಿಕೆಟ್‌ಗಾಗಿ ಅಲೆಯುವ ಸ್ಥಿತಿ: ಜೆಡಿಎಸ್

• ಪ್ರಜೋದಯ ವರದಿ



**ಬೆಂಗಳೂರು:** ಒಂದು ಕಾಲದಲ್ಲಿ ಮನೆಗೆ ಬಿ ಫಾರಂ ಬರುತ್ತೆ ಅಂತಿದ್ರು, ಈಗ ಅದೇ ಟಿಕೆಟ್‌ಗಾಗಿ ಅಲೆಯುತ್ತಿದ್ದಾರೆ ಎಂದು ಶಾಮನೂರು ಕುಟುಂಬದ ಪ್ರಾಬಲ್ಯದ ಕುರಿತು ಜೆಡಿಎಸ್ ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಅವರು ವ್ಯಂಗ್ಯವಾಡಿದ್ದಾರೆ.

ರಾಜಕೀಯ ಅಧಿಕಾರ ಯಾರಿಗೂ ಶಾಶ್ವತವಲ್ಲ ಎಂಬುದನ್ನು ಎಲ್ಲರೂ ಅರಿಯಬೇಕು. ಸೂರ್ಯ ಮೇಲೆ ಏರಿದ ಮೇಲೆ ಕೆಳಗೆ ಇಳಿಯಲೇಬೇಕು. ಕೋಟೆ ಕಟ್ಟಿದವರು ಇತಿಹಾಸದಲ್ಲಿ ಮಣ್ಣಾಗಿ ಹೋಗಿದ್ದಾರೆ. ರಾಜಕೀಯ ಸ್ಥಾನಮಾನಗಳು ಯಾವತ್ತೂ ಸ್ಥಿರವಲ್ಲ. ಕಾಲ ಬದಲಾದಂತೆ ಬದಲಾವಣೆ ಅನಿವಾರ್ಯ ಎಂದು ಪರೋಕ್ಷವಾಗಿ ಶಾಮನೂರು ಕುಟುಂಬದ ಹಿಡಿತ ಸಡಿಲವಾಗುತ್ತಿದೆ ಎಂಬ ಅರ್ಥದಲ್ಲಿ ಮಾತನಾಡಿದ್ದಾರೆ.

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಶ್ರೀನಿವಾಸ್ ದಾಸಕರಿಯಪ್ಪ ಅವರಿಗೆ ಜೆಡಿಎಸ್ ಸಂಪೂರ್ಣ ಬೆಂಬಲ ಘೋಷಿಸಿದೆ. ಅವರ ಪರವಾಗಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗು ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪ್ರಚಾರಕ್ಕೆ ಆಗಮಿಸಲಿದ್ದಾರೆ. ಇದು ಕೇವಲ ಮತದಾನವಲ್ಲ, ಬದಲಿಗೆ ಶ್ರೀಸಾಮಾನ್ಯ ಮತ್ತು ಶ್ರೀಮಂತಿಕೆ ನಡುವಿನ ಹೋರಾಟ ಎಂದು ಹೇಳಿದ್ದಾರೆ. ಕೇವಲ ಹಣ ಬಲದಿಂದ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ ಎಂಬುದು ಈ ಬಾರಿ ಸಾಬೀತಾಗಲಿದೆ. ಇಲ್ಲಿ ಜನಬಲವೇ ಅಂತಿಮ ಎಂದು ಹೇಳಿದ್ದಾರೆ.

ಶಾಮನೂರು ಶಿವಶಂಕರಪ್ಪ ಅವರು ಇಲ್ಲದ ಸಂದರ್ಭದಲ್ಲಿ ಮುಸ್ಲಿಂ ಸಮುದಾಯಕ್ಕೆ ರಾಜಕೀಯ ಸ್ವಾತಂತ್ರ್ಯ ಸಿಕ್ಕಂತಾಗಿದೆ. ಒಂದು ವೇಳೆ ಕಾಂಗ್ರೆಸ್ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡಿದರೆ ಈ ಬಾರಿ ಪೈಪೋಟಿ ಹೆಚ್ಚಾಗಲಿದೆ ಎಂದು ಹೇಳಿದರು.

## ಡಿ.ಕೆ.ಶಿವಕುಮಾರ್ ಬೆಂಬಲಿಸಿದ ಮಠಗಳಿಗೆ ಅನುದಾನ ನೀಡಿಲ್ಲ

• ಪ್ರಜೋದಯ ವರದಿ



**ಬೆಂಗಳೂರು:** ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲಿ ಎಂದು ಬಯಸಿದ ಮಠಗಳಿಗೆ ಬಜೆಟ್‌ನಲ್ಲಿ ಅನುದಾನ ನೀಡಿಲ್ಲ ಎಂದು ಈಡಿಗ ಸಮುದಾಯದ ಪ್ರಣವಾನಂದ ಸ್ವಾಮೀಜಿ ಹೇಳಿದರು.

ಶನಿವಾರ ಡಿ.ಕೆ.ಶಿವಕುಮಾರ್ ಅವರ ಭೇಟಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಕುಮಾರ್ ಪಕ್ಷಕ್ಕಾಗಿ ದುಡಿದಿದ್ದಾರೆ. ಅವರ ದುಡಿತಕ್ಕೆ ಅವರಿಗೆ ಕೂಲಿ ಸಿಗಬೇಕು. ಅತಿ ಶೀಘ್ರದಲ್ಲೇ ಮುಖ್ಯಮಂತ್ರಿ ಹುದ್ದೆ ಸಿಗಬೇಕು. ನಾವು ಕಾಂಗ್ರೆಸ್ ಹೈಕಮಾಂಡ್ ಬಳಿ ಈ ಬಗ್ಗೆ ಒತ್ತಾಯಿಸುತ್ತೇವೆ. ಶಿವಕುಮಾರ್ ಮುಖ್ಯಮಂತ್ರಿ ಆಗಲಿ ಎಂದು ಯಾವ ಯಾವ ಸ್ವಾಮೀಜಿಗಳು ಒತ್ತಾಯಿಸಿದ್ದರೋ ಅಂತಹ ಮಠಗಳಿಗೆ ಬಜೆಟ್‌ನಲ್ಲಿ ನಯಾಪೈಸೆ ನೀಡಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮೇ ತಿಂಗಳಲ್ಲಿ ವಿವಿಧ ಮಠಾಧೀಶರ ಬೃಹತ್ ಸಭೆಯನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಈ ಸಂಬಂಧ ಡಿ.ಕೆ.ಶಿವಕುಮಾರ್ ಅವರಿಗೆ ಹೇಳಲು ಬಂದಿದ್ದೆ. ಅವರು ಸಮಯ ನೀಡಲು ಒಪ್ಪಿದ್ದಾರೆ. ಹಿಂದೆ ನಾನು ನೂರಾರು ಕಿಲೋ ಮೀಟರ್ ದೂರದಿಂದ ಪಾದಯಾತ್ರೆ ಮಾಡಿಕೊಂಡು ಬಂದಿದ್ದೆ. ನಾವು, ಡಿ.ಕೆ. ಶಿವಕುಮಾರ್ ಅವರನ್ನು ಬೆಂಬಲಿಸುತ್ತೇವೆ ಎನ್ನುವ ಕಾರಣಕ್ಕೆ ನಮ್ಮ ಸಮುದಾಯದ ಯಾವ ಬೇಡಿಕೆಯನ್ನು ಸಿದ್ದರಾಮಯ್ಯ ನೆರವೇರಿಸಲಿಲ್ಲವೆಂದು ಆರೋಪಿಸಿದರು.

ಸಿದ್ದರಾಮಯ್ಯ ಹಿಂದೆ ಮುಖ್ಯಮಂತ್ರಿಯಾದರು. ಅದಕ್ಕಿಂತ ಮೊದಲು ವಿರೋಧ ಪಕ್ಷದ ನಾಯಕರಾಗಿದ್ದರು. ಈಗ ಮತ್ತೆ ಮುಖ್ಯಮಂತ್ರಿಯಾಗಿ ಮೂರು ವರ್ಷವಾಯಿತು. ಇನ್ನೊಬ್ಬರಿಗೆ ಅವಕಾಶ ಮಾಡಿಕೊಡುವುದು ಸೂಕ್ತ ಎನ್ನುವುದು ನಮ್ಮ ಅಭಿಪ್ರಾಯ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಜೊತೆಗೆ ಈಗಾಗಲೇ ದೂರವಾಣಿಯಲ್ಲಿ ಮಾತುಕತೆ ನಡೆಸಿರುವುದಾಗಿ ಸ್ವಾಮೀಜಿ ಹೇಳಿದರು.

**ಹಕ್ಕುಚ್ಯುತಿಗೆ ಮನವಿ ಶೋಭೆಯಲ್ಲ | ತಪ್ಪು ತಿದ್ದಿಕೊಳ್ಳದಿದ್ದರೆ ಜನರಿಂದ ತಕ್ಕ ಪಾಠ: ಸಂಸದ ಶ್ರೇಯಸ್**

# ಅಧಿಕಾರಿಗಳಿಗೆ ರೇವಣ್ಣ ಮಾನಸಿಕ ಕಿರುಕುಳ

• ಪ್ರಜೋದಯ ವರದಿ



**ಹಾಸನ:** ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಮಾನಸಿಕ ಕಿರುಕುಳ ನೀಡುತ್ತಿರುವುದು ಮಾತ್ರವಲ್ಲದೇ ಕಾಂಗ್ರೆಸ್ ಕಾರ್ಯಕರ್ತರಿಗೂ ತೊಂದರೆ ನೀಡುತ್ತಿದ್ದಾರೆಂದು ಸಂಸದ ಶ್ರೇಯಸ್ ಪಟೇಲ್ ಅವರು ಆರೋಪಿಸಿದರು.

ಶನಿವಾರ ಸಂಸದರ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೇವಣ್ಣ ಅವರು ಹಿರಿಯರಿದ್ದು ನಮಗೆ ತಿಳುವಳಿಕೆ ಹೇಳುವ ಕೆಲಸ ಮಾಡಬೇಕು, ಆಡಳಿತ ಹೇಗೆ ಮಾಡಬೇಕೆಂದು ತೋರಿಸಿಕೊಡಬೇಕು. ಸದನದಲ್ಲಿ ಹಕ್ಕುಚ್ಯುತಿಗೆ ಮನವಿ ಮಾಡುವ ಬದಲು ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ಕಾಗಿ ಸರ್ಕಾರದ ಗಮನ ಸೆಳೆದು ಅನುದಾನ ತರುವ ಕೆಲಸ ಮಾಡಲಿ ಎಂದು ಹೇಳಿದರು.

ಅವರ ಹಿರಿತನಕ್ಕೆ ತಕ್ಕಂತೆ ನಡೆದುಕೊಳ್ಳಲಿ, ಅಧಿಕಾರ ದುರುಪಯೋಗ ಪಡಿಸಿಕೊಂಡು ಸುಖಾಸುಮ್ಮನೆ ಅಧಿಕಾರಿಗಳು ಹಾಗು ನಮ್ಮ ಮುಖಂಡರು, ಕಾರ್ಯಕರ್ತರ ಮೇಲೆ ಇಲ್ಲ ಸಲ್ಲದ ಆರೋಪ ಮಾಡುವುದು ಬೇಡ. ಅಧಿಕಾರಿಗಳೆಲ್ಲ ಒಳ್ಳೆಯವರು ಎಂದು

> ಅಶ್ಲೀಲ ವೀಡಿಯೋಗಳ ಪೆನ್ ಡ್ರೈವ್ ಹಂಚಿಕೆ ಸಂಬಂಧ ಚಾರ್ಜ್‌ಶೀಟ್‌ನಲ್ಲಿ ಹೆಸರಿರು ವವರು ಯಾವ, ಯಾವ ಪಕ್ಷಗಳಿಗೆ ಸೇರಿದವರು ಎಂಬುದು ನನಗೆ ಗೊತ್ತಿಲ್ಲ. ಸತ್ಯಾಸತ್ಯತೆಯನ್ನು ಕೋರ್ಟ್ ತೀರ್ಮಾನ ಮಾಡಲಿದೆ. ಅನುಮಾನಗಳಿದ್ದರೆ ಉನ್ನತಮಟ್ಟದ ತನಿಖೆ ಮಾಡಿಸಲಿ, ನಾವು ಮೂಗು ತೂರಿಸಿಲ್ಲ, ಯಾರ ಹೆಸರು ಸೇರಿಸಿದ್ದಾರೆ, ಯಾರ ಹೆಸರು ಕೈ ಬಿಟ್ಟಿದ್ದಾರೆ ನನಗೆ ಗೊತ್ತಿಲ್ಲ.
> -ಶ್ರೇಯಸ್ ಪಟೇಲ್, ಸಂಸದ

ನಾನು ಹೇಳು ವುದಿಲ್ಲ, ಪ್ರಾಮಾಣಿಕ ಅಧಿಕಾರಿಗಳೂ ಇದ್ದಾರೆ. ಅವರಿಂದ ಕೆಲಸ ಮಾಡಿಸುವುದು ಜನಪ್ರತಿನಿಧಿಗಳಾದ ನಮ್ಮ ಜವಾಬ್ದಾರಿ, ಅದನ್ನು ಬಿಟ್ಟು ಆರೋಪ ಮಾಡುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದರು.

ಜಿಲ್ಲಾಧಿಕಾರಿ ಸೇರಿ ಇತರೆ ಅಧಿಕಾರಿಗಳ ವಿರುದ್ಧ ಸದನದಲ್ಲಿ ಹಕ್ಕುಚ್ಯುತಿ ಮಂಡಿಸುವುದು ಒಳ್ಳೆಯ ಬೆಳವಣಿಗೆಯಲ್ಲ, ಅಧಿಕಾರಿಗಳಿಗೆ ತೊಂದರೆ ಕೊಡುವುದು ಅವರ ಹಿರಿತನಕ್ಕೆ ಶೋಭೆ ತರುವುದಿಲ್ಲ ಎಂದು ಜನರು ಮಾತಾಡುತ್ತಿದ್ದಾರೆ. ತಮ್ಮ ತಪ್ಪನ್ನು ಅರಿತುಕೊಂಡು ತಿದ್ದುಕೊಂಡರೆ ಒಳ್ಳೆಯದು, ಇಲ್ಲದಿದ್ದರೆ ಜಿಲ್ಲೆಯ ಜನ ಪ್ರಜ್ಞಾವಂತರಿದ್ದಾರೆ, ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆಂದು ಎಚ್ಚರಿಸಿದರು.

**ಆತ್ಮಾವಲೋಕ ಮಾಡಿಕೊಳ್ಳಲಿ**

ಅಧಿಕಾರಿಗಳು ಕಾಂಗ್ರೆಸ್ ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆಂದು ಆರೋಪ ಮಾಡುತ್ತಿದ್ದಾರೆ. ಅವರೇ ಅಧಿಕಾರ » ನಾಲ್ಕನೇ ಪುಟದಲ್ಲಿ

### ದೇವರು ಯಾರ ಮನೆಯ ಸ್ವತ್ತಲ್ಲ

ರಥಕ್ಕೆ ಹೊಸ ವಸ್ತ್ರ ಹೊದಿಸುವ ಸಂಬಂಧ ನಾನು 2 ಲಕ್ಷ ರೂ. ಹಣ ನೀಡಿದ ನಂತರ ತಗಾದೆ ತೆಗೆದರು. ಹೊಳೆನರಸೀಪುರದ ಲಕ್ಷ್ಮಿ ನರಸಿಂಹ ಸ್ವಾಮಿ ಯಾರ ಮನೆಯ ಸ್ವತ್ತಲ್ಲ, ಸರ್ವರ ಆರಾಧ್ಯದೈವ. ಅವರು ಮಾಜಿ ಪ್ರಧಾನಿ, ಮಾಜಿ ಮುಖ್ಯಮಂತ್ರಿ ಮನೆಯವರು. ದೊಡ್ಡತನ ಇದ್ದವರು, ದೊಡ್ಡ ಮನೆತನದಿಂದ ಬಂದವರು ವಿಶಾಲ ಮನಸ್ಸಿನಿಂದ ನಡೆದ ಘಟನೆಯನ್ನು ಬಿಟ್ಟು ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಕೆಲಸ ಮಾಡಬೇಕಿತ್ತು ಎಂದು ತಿರುಗೇಟು ನೀಡಿದರು.

## ಮದ್ಯದ ಬಿಲ್ ಕೊಡುವಾಗ ಗಲಾಟೆ: ಸಹೋದರರಿಗೆ ಗಾಯ

• ಪ್ರಜೋದಯ ವರದಿ

**ಹಾಸನ:** ಬಾರ್‌ನಲ್ಲಿ ಖರೀದಿಸಿದ ಮದ್ಯದ ಬಿಲ್ ಪಾವತಿಸುವ ವೇಳೆ ನಡೆದ ಮಾತಿನ ವಾಗ್ವಾದ ಗಂಭೀರ ಸ್ವರೂಪ ಪಡೆದು ಸಹೋದರರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಗರದಲ್ಲಿ ನಡೆದಿದೆ.

ತಮ್ಲಾಪುರದ ಯೋಗೀಶ್ ಹಾಗು ಮಂಜುನಾಥ್ ಗಾಯಾಳುಗಳು. ದಾಸರ ಕೊಪ್ಪಲು ಅರುಣ ಹಾಗು ಇತರ ಮೂವರು ಹಲ್ಲೆ ನಡೆಸಿದ್ದಾರೆ ಎನ್ನಲಾಗಿದೆ.

ಮಾ.19ರ ರಾತ್ರಿ 11 ಗಂಟೆ ವೇಳೆ ಯೋಗೀಶ್ ರಿಂಗ್ ರಸ್ತೆಯಲ್ಲಿರುವ ಅನ್ನಪೂರ್ಣೇಶ್ವರಿ ಬಾರ್‌ನಲ್ಲಿ ಮದ್ಯ ಪದಾರ್ಥ ಖರೀದಿಸಿ ಬಿಲ್ ಕೊಡುತ್ತಿದ್ದಾಗ ಕ್ಯಾಷಿಯರ್ ಬೇಗ ಕೊಡಿ ಸಮಯವಾಗಿದೆ ಎಂದಿದ್ದಾನೆ. ಆಗ ಅಲ್ಲಿಯೇ ಇದ್ದ ದಾಸರ ಕೊಪ್ಪಲು ಅರುಣ, ಬೇಗ ದುಡ್ಡು ಕೊಡು ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಹೀಗೆ ಇಬ್ಬರ ನಡುವೆ ಮಾತಿನ ಚಕಮಕಿ ಏರ್ಪಟ್ಟು ಅರುಣ ಹಾಗು ಆತನ ಸ್ನೇಹಿತರು ಒಟ್ಟಾಗಿ ಯೋಗೀಶ್ ಅವರನ್ನು ತಳ್ಳಾಡಿದ್ದಾರೆ. ಗಲಾಟೆ ಜೋರಾಗುತ್ತಿದ್ದಂತೆ ಅಪಾಯದ ಮುನ್ಸೂಚನೆಯಿಂದ ಯೋಗೀಶ್ ಅಲ್ಲಿಂದ ವಾಪಾಸ್ಸಾಗಿದ್ದಾರೆ. ಆದರೆ ಆಟೋದಲ್ಲಿ ಬೆನ್ನಟ್ಟಿ ಬಂದ ಅರುಣ ರಾಡ್‌ನಿಂದ ಹಣೆ ಮತ್ತು ಮುಖಕ್ಕೆ ಹೊಡೆದಿದ್ದಾನೆ. ಲಾಂಗ್‌ನಿಂದ ಬೀಸಿದಾಗ ಯೋಗೀಶ್ ಕೆಳಗೆ ಬಿದ್ದಿದ್ದು ಮೂವರು ಸೇರಿ ಕಾಲಿನಿಂದ ತುಳಿದಿದ್ದಾರೆ. ಗಲಾಟೆ ವಿಷಯ ತಿಳಿದು ಯೋಗೀಶ್ ಅವರ ಸಹೋದರ ಮಂಜುನಾಥ್ ಸ್ಥಳಕ್ಕೆ ಬರುತ್ತಿದ್ದಂತೆ ಅವರ ಮೇಲೂ ಹಲ್ಲೆ ನಡೆಸಿದ್ದಾರೆ. ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತಾವರೆಹಳ್ಳಿಯಲ್ಲಿ ವ್ಯಕ್ತಿ ಅನುಮಾನಾಸ್ಪದ ಸಾವು

• ಪ್ರಜೋದಯ ವರದಿ



**ಅರಸೀಕೆರೆ:** ತಾಲ್ಲೂಕಿನ ತಾವರೆಹಳ್ಳಿ ಗ್ರಾಮದ ಜಮೀನಿನಲ್ಲಿ ಶನಿವಾರ ಬೆಳಿಗ್ಗೆ ವ್ಯಕ್ತಿಯ ಶವ ಪತ್ತೆಯಾಗಿದ್ದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.

ಜಾವಗಲ್ ಹೋಬಳಿ ಅರಕೆರೆ ಗ್ರಾಮದ ಪ್ರವೀಣ್ (38) ಮೃತರು. ಯುಗಾದಿ ಹಬ್ಬದ ಹಿನ್ನಲೆಯಲ್ಲಿ ಸ್ನೇಹಿತರೊಂದಿಗೆ ಇಸ್ಪೀಟ್ ಆಡಲು ತೆರಳಿದ್ದಾಗಿ ತಿಳಿದುಬಂದಿದೆ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಸ್ಥಳಕ್ಕೆ ಜಾವಗಲ್ ಠಾಣೆ ಪೊಲೀಸರು ಭೇಟಿ ನೀಡಿ ಮೃತದೇಹವನ್ನು ಮರಣೋತ್ತರ ಪರೀಕ್ಷೆ ಗಾಗಿ ಹಾಸನದ ಹಿಮ್ಸ್‌ಗೆ ರವಾನಿಸಿದ್ದಾರೆ.

**ಮಧ್ಯರಾತ್ರಿ ಮೊಬೈಲ್ ಸ್ವಿಚ್ಡ್ ಆಫ್**

ಚಾಲಕನಾಗಿದ್ದ ಪ್ರವೀಣ್ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಕೆಲಸಕ್ಕೆ ಹೋಗುತ್ತಿದ್ದೇನೆಂದು ಮನೆಯವರಿಗೆ ಹೇಳಿ ಹೋದವನು ರಾತ್ರಿಯಾದರೂ ವಾಪಾಸ್ಸಾಗಿರಲಿಲ್ಲ. ರಾತ್ರಿ 10 ಗಂಟೆಗೆ ಕರೆ ಮಾಡಿದಾಗ ಅರಕೆರೆ ಬಸ್ ನಿಲ್ದಾಣದ ಬಳಿಯೇ ಇದ್ದು ಬರುತ್ತೇನೆಂದು ಹೇಳಿದ್ದ. ಆದರೆ ರಾತ್ರಿ 11 ಗಂಟೆಗೂ ಬಾರದಿದ್ದಾಗ ತಂದೆ ಕರೆ ಮಾಡಿದ್ದು ಆಗ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಮಾರನೇ ದಿನ ಬೆಳಿಗ್ಗೆ ಸಂಬಂಧಿ ಕರು ಕರೆ ಮಾಡಿ ತಾವರೆಹಳ್ಳಿಯ ಜಮೀನೊಂದರಲ್ಲಿ ಪ್ರವೀಣ್ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ. ಸಾವಿನ ಬಗ್ಗೆ ಅನು ಮಾನವಿದ್ದು ಸೂಕ್ತ ತನಿಖೆ ನಡೆಸ ಬೇಕೆಂದು ದೂರಿನಲ್ಲಿ ತಂದೆ ನರಸಿಂಹಮೂರ್ತಿ ಆಗ್ರಹಿಸಿದ್ದಾರೆ.

**ಸಾವಿನ ಸುತ್ತ ಅನುಮಾನಗಳ ಹುತ್ತ**

ಇಸ್ಪೀಟ್ ಅಡ್ಡೆ ಮೇಲೆ ಪೊಲೀಸರು ಮಧ್ಯರಾತ್ರಿ ದಾಳಿ ನಡೆಸಿದಾಗ ಪ್ರವೀಣ್ ಓಡಲು ಸಾಧ್ಯವಾಗದೆ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾನೆಂದು ಸಂಶಯ ವ್ಯಕ್ತವಾಗಿದೆ. ಮತ್ತೊಂದೆಡೆ ಆತನಿಗೆ ಮೂರ್ಛೆ ರೋಗ ಖಾಯಿಲೆ ಇತ್ತು. ಅದರಿಂದಲೇ ಮೃತಪಟ್ಟಿರಬಹುದೆಂದು ಪ್ರವೀಣ್ ಸಹೋದರ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾನೆ. ಸಾವಿನ ಸುತ್ತ ಸಾಕಷ್ಟು ಅನು ಮಾನಗಳು ಹುಟ್ಟಿಕೊಂಡಿದ್ದು ಮರಣೋತ್ತರ ಪರೀಕ್ಷೆ ಬಳಿಕ ಸತ್ಯಾಂಶ ತಿಳಿದು ಬರಲಿದೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗೃಹೋಪಯೋಗಿ ಸಿಲಿಂಡರ್‌ಗೆ ಸಮಸ್ಯೆ ಇಲ್ಲ

• ಪ್ರಜೋದಯ ವರದಿ



**ಮೈಸೂರು:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದ ಸಿಲಿಂಡರ್ ಬಿಕ್ಕಟ್ಟು ಸೃಷ್ಟಿಯಾಗಿದೆಯಾದರೂ ರಾಜ್ಯದಲ್ಲಿ ಗೃಹಬಳಕೆಯ ಗ್ರಾಹಕರಿಗೆ ತೊಂದರೆಯಾಗುವುದಿಲ್ಲ ಎಂದು ರಾಜ್ಯ ಎಲ್‌ಪಿಜಿ ಸಿಲಿಂಡರ್ ವಿತರಕರ ಸಂಘದ ಅಧ್ಯಕ್ಷ ಮೈಹುಲ್ ಜೆ.ಪಟೇಲ್ ಅವರು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದ್ಯದ ಪರಿಸ್ಥಿತಿಯಲ್ಲಿ ಗೃಹಬಳಕೆ ಅಡುಗೆ ಅನಿಲದ ಪೂರೈಕೆ ಸಹಜ ಸ್ಥಿತಿಯಲ್ಲಿದೆ. ಗ್ರಾಹಕರು ಬುಕಿಂಗ್ ಮಾಡಿದ ತಕ್ಷಣ ರಿಫಿಲ್ ಪಡೆಯುತ್ತಿದ್ದಾರೆ. ಆದರೆ ವಿತರಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರಲು ಇ-ಕೆವೈಸಿ ಮತ್ತು ಒನ್-ಟೈಮ್ ಪಾಸ್‌ವರ್ಡ್ (ಒಟಿಪಿ) ಕಡ್ಡಾಯಗೊಳಿಸಲಾಗಿದೆ. ಯಾರು ಇನ್ನೂ ಇ-ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿಲ್ಲವೋ ಅವರು ತಕ್ಷಣವೇ ಅದನ್ನು ಮಾಡಿಸಿಕೊಳ್ಳಬೇಕು ಎಂದುಸೂಚಿಸಿದ್ದಾರೆ.

ಪೈಪ್ಡ್ ನ್ಯಾಚುರಲ್ ಗ್ಯಾಸ್ ಸಂಪರ್ಕ ಹೊಂದಿರುವವರು ತಮ್ಮ ಎಲ್‌ಪಿಜಿ ಸಂಪರ್ಕಗಳನ್ನು ಬಿಟ್ಟುಕೊಡಲು ತಿಳಿಸಲಾಗಿದೆ. ಪಿಎನ್‌ಜಿ ಸೇವಾ ಪೂರೈಕೆದಾರರ ಸಹಯೋಗದೊಂದಿಗೆ ಇಂತಹ ಎರಡೂ ಸಂಪರ್ಕ ಹೊಂದಿರುವವರನ್ನು ಗುರುತಿಸಲಾಗುತ್ತಿದ್ದು, ಅಂತಹಎಲ್‌ಪಿಜಿ ಸಂಪರ್ಕಗಳನ್ನು ಹಿಂಪಡೆಯಲಾಗುವುದು ಎಂದರು.

## ವಿವಾದಾತ್ಮಕ ಹೇಳಿಕೆ ನೀಡದಂತೆ ಸಲಹೆ



• ಪ್ರಜೋದಯ ವರದಿ

**ಲಖನೌ:** ಉತ್ತರ ಪ್ರದೇಶ ವಿಧಾನ ಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ ಯೋಗಿ ಆದಿತ್ಯನಾಥ್ ನೇತೃತ್ವದ ಸರ್ಕಾರದ ಸಚಿವರು ಮತ್ತು ಪಕ್ಷದ ಶಾಸಕರು ತಮ್ಮ ಕಾರ್ಯಶೈಲಿ ಸುಧಾರಿಸಿಕೊಳ್ಳುವಂತೆ ಮತ್ತು ವಿವಾದಾತ್ಮಕ ಹೇಳಿಕೆ ನೀಡದಂತೆ ಆರ್‌ಎಸ್‌ಎಸ್ ಸಲಹೆ ನೀಡಿದೆ.

2027ರ ವಿಧಾನಸಭಾ ಚುನಾವಣೆಗೆ ಮುನ್ನ ಪಕ್ಷದ ಕಾರ್ಯಕರ್ತರಲ್ಲಿ ಉಂಟಾಗಿರುವ ಅಸಮಾಧಾನವನ್ನು ಪರಿಹರಿಸುವತ್ತ ಆರ್‌ಎಸ್‌ಎಸ್ ಗಮನ ಹರಿಸಿದೆ. ಕಳೆದ ಎರಡು ತಿಂಗಳಲ್ಲಿ ಮುಖ್ಯಸ್ಥ ಮೋಹನ್ ಭಾಗವತ್, ಉತ್ತರ ಪ್ರದೇಶ ಪ್ರವಾಸದ ಸಂದರ್ಭದಲ್ಲಿ ಪ್ರಾಂತ್ಯವಾರು ಸರಣಿ ಸಭೆಗಳನ್ನು ನಡೆಸಿದ್ದರು. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸಹ ರಾಜ್ಯಾದ್ಯಂತ ಸಂಘದೊಂದಿಗೆ ಸಮನ್ವಯ ಸಭೆಗಳನ್ನು ನಡೆಸಿದ್ದಾರೆ.

## ಸಾರಿಗೆ ಬಸ್ ಡಿಕ್ಕಿ: ಯುವಕ ಸಾವು

• ಪ್ರಜೋದಯ ವರದಿ



**ಬೇಲೂರು:** ಕೆಎಸ್‌ಆರ್‌ಟಿಸಿ ಬಸ್ ಹಾಗು ಮಾರುತಿ ಆಲ್ಟೋ ಕಾರು ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಕಾರು ಚಾಲಕ ಮೃತಪಟ್ಟು ಇಬ್ಬರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಕೋಡನಹಳ್ಳಿ ರಸ್ತೆ ತಿರುವಿನಲ್ಲಿ ನಡೆದಿದೆ.

ತಾಲ್ಲೂಕಿನ ಬೆನ್ನೂರು ಗ್ರಾಮದ ದಿಕ್ಷೀತ್ (29) ಮೃತ ಯುವಕ. ಅದೇ ಗ್ರಾಮದ ಅನಿಲ್ ಹಾಗು ರುದ್ರೇಶ್ ಎಂಬುವವರು ಗಾಯಗೊಂಡಿದ್ದು ಹಿಮ್ಸ್‌ಗೆ ದಾಖಲಿಸಲಾಗಿದೆ.

ಶುಕ್ರವಾರ ಸಂಜೆ ಬೆನ್ನೂರಿನಿಂದ ವೇಗವಾಗಿ ಬಂದ ಬಸ್ ಚಾಲಕ ನಿಯಂತ್ರಣ ತಪ್ಪಿ ಕಾರಿಗೆ ಡಿಕ್ಕಿ ಮಾಡಿದ್ದಾನೆ. ಅಪಘಾತದ ರಭಸಕ್ಕೆ ಗಂಭೀರ ಗಾಯಗೊಂಡಿದ್ದ ದಿಕ್ಷೀತ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರು ಸಂಪೂರ್ಣ ಜಖಂಗೊಂಡಿದೆ.

ಶನಿವಾರ ಬೆಳಿಗ್ಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿದ ಶಾಸಕ ಹೆಚ್.ಕೆ.ಸುರೇಶ್ ಅವರು ಮೃತ ದಿಕ್ಷೀತ್ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಈ ವೇಳೆ ಮಾತನಾಡಿದ ಶಾಸಕರು, ಕೆಎಸ್‌ಆರ್‌ಟಿಸಿ ಬಸ್ ಹಾಗು ಕಾರು ಡಿಕ್ಕಿಯಾಗಿ ಯುವಕ ಮೃತಪಟ್ಟಿದ್ದಾನೆ. ಅಪಘಾತದಲ್ಲಿ ಗಾಯಗೊಂಡಿದ್ದ ಇಬ್ಬರಿಗೆ ಚಿಕ್ಕಮಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಹಿಮ್ಸ್‌ಗೆ ದಾಖಲಿಸಲಾಗಿದೆ. ಕುಟುಂಬಕ್ಕೆ ಆಧಾರವಾಗಿದ್ದ ಯುವಕ ಮೃತಪಟ್ಟಿದ್ದು ದು:ಖ ತರಿಸಿದೆ. ನೊಂದ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರ ಕಲ್ಪಿಸಿಕೊಡಲಾಗುವುದೆಂದರು.

ಮುಖ್ಯ ರಸ್ತೆಯಲ್ಲಿ ಹಂಪ್ಸ್ ಹಾಕಲು ಕ್ರಮ ಕೈಗೊಳ್ಳಲಾಗಿದೆ. ಜೆ.ಪಿ.ನಗರ, ವೈಡಿಡಿ ಕಾಲೇಜು ಹಾಗು ತಾಲ್ಲೂಕು ನ್ಯಾಯಾಲಯ ಸಮೀಪ ಹಂಪ್ಸ್ ಹಾಕಲಾಗುತ್ತಿದೆ. ವಾಹನ ಚಾಲಕರು ಸಹ ನಿಧಾನವಾಗಿ ವಾಹನ ಓಡಿಸಬೇಕೆಂದು ಸಲಹೆ ನೀಡಿದರು. ವೃತ್ತ ನಿರೀಕ್ಷಕ ರೇವಣ್ಣ, ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹಾಜರಿದ್ದರು.

**ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ಮುಸ್ಲಿಮರು | ಸಂಸದ ಶ್ರೇಯಸ್ ಪಟೇಲ್ ಭಾಗಿ**

# ಜಿಲ್ಲಾದ್ಯಂತ ರಂಜಾನ್ ಹಬ್ಬದ ಸಂಭ್ರಮ

• ಪ್ರಜೋದಯ ವರದಿ



**ಹಾಸನ:** ನಗರ ಸೇರಿ ಜಿಲ್ಲಾದ್ಯಂತ ಪವಿತ್ರ ರಂಜಾನ್ ಹಬ್ಬವನ್ನು ಭಕ್ತಿಭಾವ ಮತ್ತು ಸೌಹಾರ್ದತೆಯಿಂದ ಆಚರಿಸಲಾಯಿತು.

ಮುಸ್ಲಿಂ ಬಾಂಧವರು ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಉಪವಾಸದ ಮಹತ್ವವನ್ನು ಸ್ಮರಿಸಿ ಸಮಾಜದಲ್ಲಿ ಶಾಂತಿ, ಏಕತೆ, ಸಹಾನುಭೂತಿ ಮತ್ತು ಸಹಬಾಳ್ವೆಯ ಸಂದೇಶ ಹಂಚಿಕೊಂಡರು.

ನಗರದ 80 ಅಡಿ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಸಂಸದ ಶ್ರೇಯಸ್ ಪಟೇಲ್ ಭಾಗವಹಿಸಿ ಮುಸ್ಲಿಂ ಬಾಂಧವರಿಗೆ ಹಬ್ಬದ ಶುಭಾಶಯ ತಿಳಿಸಿದರು.

ಹಳೇ ಈದ್ಗಾ ಸಮಿತಿ ಅಧ್ಯಕ್ಷ ಸಮೀರ್ ಖಾನ್ ಅವರು ಮಾತನಾಡಿ, ಪವಿತ್ರ ರಂಜಾನ್ ಮಾಸ ಮತ್ತು ಯುಗಾದಿ ಹಬ್ಬ ಒಂದೇ ಸಂದರ್ಭದಲ್ಲಿ ಬಂದಿರುವುದು ಸಮಾಜದಲ್ಲಿ ಸೌಹಾರ್ದ, ಸಹಿಷ್ಣುತೆ ಮತ್ತು ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ಸಂಕೇತವಾಗಿದೆ ಎಂದರು.

ರಂಜಾನ್ ಮಾಸದಲ್ಲಿ ಮುಸ್ಲಿಂ ಸಮುದಾಯದವರು ಕಟ್ಟುನಿಟ್ಟಾಗಿ ಉಪವಾಸ ಆಚರಿಸುವುದು ವಿಶೇಷ. ಪುಟ್ಟ ಮಕ್ಕಳಿಂದ ಹಿಡಿದು ಮಹಿಳೆಯರು, ವೃದ್ಧರು ಎಲ್ಲರೂ ಬೆಳಿಗ್ಗೆ 5 ಗಂಟೆಯಿಂದ ಸಂಜೆ 7ರ ವರೆಗೆ ಉಪವಾಸವಿದ್ದು, ದೇವರ ಆರಾಧನೆ, ಪ್ರಾರ್ಥನೆ ಹಾಗು ಧಾರ್ಮಿಕ ಚಿಂತನೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ ಎಂದರು.

ಉಪವಾಸವು ಕೇವಲ ದೇಹದ ನಿಯಂತ್ರಣವಷ್ಟೇ ಅಲ್ಲ, ಮನಸ್ಸಿನ ಶುದ್ಧೀಕರಣಕ್ಕೂ ಕಾರಣವಾಗುತ್ತದೆ. ಈ ಪವಿತ್ರ ತಿಂಗಳಲ್ಲಿ ಸಮಾಜಮುಖಿ ಚಟುವಟಿಕೆಗಳು ಹೆಚ್ಚಾಗಿ ನಡೆ ಯುತ್ತವೆ. ಅನಾಥರು ಹಾಗು ಅಗತ್ಯವಿರುವವರನ್ನು ಗುರುತಿಸಿ ಅವರಿಗೆ ಆಹಾರ, ಹಣ ಹಾಗು ಅಗತ್ಯ ವಸ್ತುಗಳನ್ನು ನೀಡುವ ಮೂಲಕ ಮಾನವೀಯತೆ ತೋರಲಾಗುತ್ತದೆ. ಜಕಾತ್ ಮತ್ತು ದಾನ ಧರ್ಮಗಳ ಮೂಲಕ ಸಮಾಜದಲ್ಲಿ ಸಮಾನತೆ ಹಾಗು ಸಹಾನುಭೂತಿ ಬೆಳೆಸುವ ಪ್ರಯತ್ನ ನಡೆಯುತ್ತದೆಂದು ಹೇಳಿದರು.

ಪ್ರವಾದಿ ಮೊಹಮ್ಮದ್ ಅವರು ಉಪದೇಶಿಸಿದಂತೆ ಉಪವಾಸ ಎಂದರೆ ಹಸಿವು, ದಾಹ ಸಹಿಸುವುದಲ್ಲ. ಕೆಟ್ಟ ಗುಣ, ದುರ್ವ್ಯಸನ, ದ್ವೇಷ, ಅಸೂಹೆಗಳನ್ನು ತೊರೆದು ಒಳ್ಳೆಯ ಜೀವನ ನಡೆಸುವ ಸಂಕಲ್ಪ ಮಾಡುವುದಾಗಿದೆ. ಮಾನವೀಯ ಮೌಲ್ಯಗಳನ್ನು ಪಾಲಿಸುವುದು, ಸತ್ಯ, ಸಹನೆ ಮತ್ತು ಪ್ರೀತಿ ಎಂಬ ಗುಣಗಳನ್ನು ಬೆಳೆಸುವುದು ರಂಜಾನ್ ಮಾಸದ ಪ್ರಮುಖ ಸಂದೇಶವಾಗಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಯುದ್ಧಗಳು, ಹಿಂಸಾಚಾರ ಮತ್ತು ಮಾನವ ವಿರೋಧಿ ಕೃತ್ಯಗಳು ಅಂತ್ಯವಾಗಲಿ ಎಂದು ದೇಶ-ವಿದೇಶಗಳಲ್ಲೂ ಪ್ರಾರ್ಥನೆ ಸಲ್ಲಿಸಲಾಗುತ್ತಿದೆ. ವಿಶ್ವದಲ್ಲಿ ಶಾಂತಿ ನೆಲೆಸಲಿ, ಎಲ್ಲರೂ ನೆಮ್ಮದಿಯಿಂದ ಬದುಕುವ ಪರಿಸರ ನಿರ್ಮಾಣವಾಗಲಿ ಎಂಬ ಆಶಯದೊಂದಿಗೆ ಮುಸ್ಲಿಂ ಸಮುದಾಯದವರು ಪ್ರಾರ್ಥನೆ ಮಾಡಿದ್ದಾರೆ. ಯುಗಾದಿ ಹಬ್ಬದ ಸಂಭ್ರಮದ ನಡುವೆ ರಂಜಾನ್ ಆಚರಣೆ ನಡೆದಿರುವುದು ಧರ್ಮೀಯ ಸೌಹಾರ್ದತೆಗೆ ಉತ್ತಮ ಉದಾಹರಣೆಯಾಗಿದ್ದು, ಹಾಸನದಲ್ಲಿ ಎಲ್ಲಾ ಧರ್ಮದ ಜನರು ಪರಸ್ಪರ ಶುಭಾಶಯಗಳನ್ನು » ನಾಲ್ಕನೇ ಪುಟದಲ್ಲಿ

# ಆದ್ಯ ವಚನಕಾರ ದೇವರ ದಾಸಿಮಯ್ಯ



ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಸಾಹಿತ್ಯಕ್ಕೆ ಅಗ್ರಸ್ಥಾನವಿದೆ. ಸಾಮಾನ್ಯವಾಗಿ ವಚನ ಸಾಹಿತ್ಯವೆಂದಾಕ್ಷಣ ಸ್ಮರಣೆಗೆ ಬರುವುದು ಬಸವಣ್ಣನವರು ಮತ್ತು ಅವರ ಸಮಕಾಲೀನರು. ಆದರೆ ವಚನ ಸಾಹಿತ್ಯಕ್ಕೆ ಶ್ರೀಕಾರ ಹಾಕಿ ಪೀಠಿಕೆ ಬರೆದು ಮುನ್ನುಡಿ ಹಾಡಿದವರು ದೇವರದಾಸಿಮಯ್ಯನವರು. ಇವರು ಕ್ರಿ.ಶ.1008 ರಿಂದ 1040ರ ಕಾಲಾವಧಿಯಲ್ಲಿ ಜೀವಿಸಿದ್ದರು.

ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಶರಣರು ರಚಿಸಿದ ವಚನ ಸಾಹಿತ್ಯ ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ. ಹಲವಾರು ಶರಣರು ತಮ್ಮ ವಚನಗಳ ಮೂಲಕ ಸರಳ ಶೈಲಿಯಲ್ಲಿ ಬದುಕಿನ ಅರ್ಥವನ್ನು ತಿಳಿಸಿದ್ದಾರೆ. ಬದುಕು ಎಂಬುದು ಸಂವಹನ ಸ್ವರೂಪಿ. ಹಾಗೆಯೇ ಸಾಹಿತ್ಯ ಎಂಬುದು ಕೂಡ. ಸರಳ ಸುಂದರವಾದ ವಚನ ಪ್ರಾಕಾರಕ್ಕೆ ಅಡಿಪಾಯ ಹಾಕಿದ ದಾಸಿಮಯ್ಯ ಅರಿವಿನ ಸಿರಿಮನೆಯಾಗಿದ್ದರು.

*ಶರಧಿಯ ಮೇಲೆ ಧರೆಯ ಶರಗದಂತಿರಿಸಿದೆ*
*ಅಂಬರಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ*
*ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ*
*ನೊರೆವಾಲೊಳಗೆ ತುಪ್ಪದ ಕಂಪಿಲ್ಲದಂತಿರಿಸಿದೆ*
*ಶರೀರದೊಳಗೆ ಆತ್ಮನ ಆರೂ ಕಾಣದಂತಿರಿಸಿದೆ*
*ನೀ ಬೆರಸಿಹ ಬೆರಗಾದೆನಯ್ಯ ರಾಮನಾಥ*


ಸೃಷ್ಟಿಕರ್ತ ಭಗವಂತನ ಲೀಲೆ ಇದಮಿತ್ಥಂ ಎಂದು ಹೇಳಲುಬಾರದು. ಸಾರ, ಅಂಬರ, ಗಿಡಮರ, ಹಾಲು, ಶರೀರಗಳಲ್ಲಿ ಊಹಿಸಲಾಗದಷ್ಟು ಅಚ್ಚರಿ ಕಂಡು ಬೆರಗಾಗಿದ್ದಾರೆ ದಾಸಿಮಯ್ಯನವರು. ಸಮಾಜ ವ್ಯವಸ್ಥೆಯಲ್ಲಿನ ಲೋಪ ದೋಷಗಳನ್ನು ತಮ್ಮ ವಚನಗಳ ಮೂಲಕ ಬಿಡಿಸಿದ ದಾಸಿಮಯ್ಯ ತಮ್ಮ ವಚನಗಳನ್ನು ರಾಮನಾಥನಿಗೆ ಅರ್ಪಿಸಿದ್ದಾರೆ.

ಸಗರ ನಾಡೆನಿಸಿಕೊಂಡಿರುವ ಕಲ್ಯಾಣ ಕರ್ನಾಟಕದ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಮುದನೂರಿನಲ್ಲಿ ದಾಸಿಮಯ್ಯರು ಜನಿಸಿದರು. ಈ ಗ್ರಾಮವು ಹಿಂದೆ ಗುಲ್ಬರ್ಗಾ ಜಿಲ್ಲೆಗೆ ಸೇರಿತ್ತು. ಯಾದಗಿರಿ ಯಿಂದ 90 ಕಿ.ಮೀ. ಸುರಪುರದಿಂದ 37 ಕಿ.ಮೀ. ಮುಲ್ಲಾ ಹುಣಸಗಿ ರಸ್ತೆಯ ಮಧ್ಯದಲ್ಲಿ ಕೆಂಭಾವಿ ಯಿಂದ 7 ಕಿ.ಮೀ. ದೂರದಲ್ಲಿದೆ.

## ನಾಳೆ ದಾಸಿಮಯ್ಯ ಜಯಂತಿ

ದಾಸಿಮಯ್ಯ ನವರು ದೇವಾಂಗ ಜನಾಂಗದ ಮೂಲ ಪುರುಷನಾದ ದೇವಲನ 7ನೇ ಅವತಾರವೆಂದು ವಿದ್ಯಾದರ, ಪುಷ್ಪದಂತ, ಬೇತಾಲ, ವರರುಚಿ, ಚಿತ್ರಯೋಗಿ, ದೇವಶಾಲಿ, ದೇವದಾಸರೆಂದು ಕಥೆಗಳಲ್ಲಿ ಹೇಳಲಾಗಿದೆ. ಈ ಸಪ್ತ ಅವತಾರ ಕುರಿತು ಬ್ರಹ್ಮಾಂಡ ಪುರಾಣದ ಶ್ಲೋಕ ಹೀಗಿದೆ.

*ವಿದ್ಯಾಧರೋ ದ್ರಾಪರಾದೌ ಮಧ್ಯೇ ಭೂತ್ ಪುಷ್ಪದಂತಕಃ*
*ಅಂತೇವತಾರೋ ಬೇತಾಲ ಕಲೌ ವರರುಚಿ ಸ್ತಥಾ*
*ಚಿತ್ರಯೋಗಿ ದೇವಶಾಲೀ ದೇವದಾಸೋ ಭವಂ ಸಪ್ತ:*




ಬಾದಾಮಿ ಚಾಲುಕ್ಯರ ಕಾಲದಲ್ಲಿ ಮುದ ನೂರು ಅಗ್ರಹಾರ ವಾಗಿತ್ತು. ಸಹಸ್ರಮಾನದ ಇತಿಹಾಸ ಹೊಂದಿರುವ ದೇವಾಲಯಗಳು, ಶಿಲ್ಪಕಲಾ ಕೃತಿಗಳು ಶಿಲಾಶಾಸನಗಳು ಮುದನೂರಿನಲ್ಲಿವೆ. ಇಲ್ಲಿರುವ ರಾಮತೀರ್ಥ, ಲಕ್ಷ್ಮಣ ತೀರ್ಥ, ಸಕ್ಕರೆ ತೀರ್ಥ, ಮರಳು ತೀರ್ಥ, ಪಾಂಡವ ತೀರ್ಥ, ಹಾಲು ತೀರ್ಥ ಮತ್ತು ಸಂಗಮ ತೀರ್ಥಗಳು (ಪುಷ್ಕರಣಿ) ದೇವಾಂಗನ ಸಪ್ತಾವತಾರಗಳ ದ್ಯೋತಕವೆನ್ನುವರು. ಸಪ್ತತೀರ್ಥಗಳ ಸುತ್ತಲೂ ಕೆತ್ತಿದ ಕಲಾಕೃತಿಗಳು ರಾಮಾಯಣ ಮಹಾಭಾರತ ಕಥೆಗಳನ್ನು ತಿಳಿಸುತ್ತವೆ.

ದೇವರ ದಾಸಿಮಯ್ಯನವರ ದೇವಸ್ಥಾನ, ಸಿದ್ಧಲಿಂಗೇಶ್ವರ ದೇವಸ್ಥಾನ, ವೇಣುಗೋಪಾಲ ದೇವಾಲಯ, ಮಲ್ಲಿಕಾರ್ಜುನ ಗುಡಿ, ಸಂಗಮನಾಥ ದೇವಾಲಯಗಳ ಗ್ರಾಮದಲ್ಲಿ 18ಕ್ಕೂ ಹೆಚ್ಚು ಶಿಲಾಶಾಸನಗಳು ದೊರೆತಿವೆ. ಮುದನೂರನ್ನು ಮುದೇನೂರು, ಮುದ್ದಾಪುರ, ದೇವರ ಮುದನೂರು ಎಂದೆಲ್ಲಾ ಕರೆಯಲಾಗಿದೆ. ಶಿಲಾಶಾಸನಗಳು ರಾಷ್ಟ್ರಕೂಟರ, ಚಾಲುಕ್ಯರ ಕಲಚೂರಿಗಳ ಆಳ್ವಿಕೆಯ ಇತಿಹಾಸ ಹೇಳುತ್ತವೆ. ಈ ದೊರೆಗಳ ಕಾಲದಲ್ಲಿ ಈ ಗ್ರಾಮವು ಅಗ್ರಹಾರವಾಗಿತ್ತು. ಚಿಕ್ಕಮುದೇನೂರು ಗೋಪಾಲಸ್ವಾಮಿ ದೇವಾಲಯದ ಕಂಬದಲ್ಲಿರುವ ಶಿಲಾಶಾಸನದಲ್ಲಿ ದಕ್ಷಿಣ ವಾರಾಣಾಸಿ ಮುದನೂರು ಎಂದಿದೆ.

ದೇವಾಲಯಗಳ ಸಮುಚ್ಚಯ ಹೊಂದಿ ನವ ಮಾತೃಕೆಯರ ಶಿಲಾಪಟ್ಟಿ, ಶಿವ ಪಾರ್ವತಿಯರ ಉಬ್ಬು ಶಿಲ್ಪಗಳು, ಏಳು ಹಡೆಯ ನಾಗರಶಿಲ್ಪವಿದೆ. ದಾಸಿಮಯ್ಯನ ಆರಾಧ್ಯ ದೈವ ರಾಮನಾಥ ಮಂದಿರವೇ ರಾಮೇಶ್ವರ ದೇವಾಲಯ. ಇದು ದ್ವಿಕೂಟವಾಗಿದ್ದು ಪೂರ್ವಕ್ಕೆ ಮುಖ ಮಾಡಿರುವ ಗರ್ಭಗೃಹದಲ್ಲಿ ಬೃಹತ್ತಾದ ರಾಮಲಿಂಗೇಶ್ವರ ಲಿಂಗವಿದೆ. ಪಂಚ ಶಾಖಾ ಬಾಗಿಲು ಹೊಂದಿರುವ ಗಜಲಕ್ಷ್ಮಿಯ ಲಲಾಟ ಪಟ್ಟಿಕೆಯಿದೆ. ಪಶ್ಚಿಮಾಭಿಮುಖವಾಗಿ ಉಮಾ ಮಹೇಶ್ವರಿ ಶಿಲ್ಪವಿದೆ. ಊರ ಹೊರಗೆ ಭದ್ರ ಪ್ಪಯ್ಯನ ಮಠವಿದೆ. ಮುಖ್ಯದ್ವಾರಕ್ಕೆ ಬ್ರಹ್ಮ, ನಟರಾಜ, ವಿಷ್ಣು ದೇವತೆಗಳುಳ್ಳ ಆಕರ್ಷಕ ಮಕರ ತೋರಣವಿದೆ. 18 ಕೈಗಳ ನಟರಾಜನ ಉಬ್ಬು ಶಿಲ್ಪ ಸುಂದರವಾಗಿದೆ. ದಾಸಿಮಯ್ಯನವರು ಬಾಲ್ಯವನ್ನು ಆಟ ಪಾಠ ಶಿವಪೂಜೆ ಧ್ಯಾನದಲ್ಲಿ ಮುದನೂರಿನಲ್ಲಿ ಕಳೆದರು. ಶ್ರೀಶೈಲ ಪ್ರಸಿದ್ಧ ವಿದ್ಯಾಕೇಂದ್ರವಾಗಿದ್ದು ಅಲ್ಲಿಗೆ ಹೋಗಿ ಸೂರ್ಯಸಿಂಹಾಸನ ಪೀಠದ 3ನೇ ಜಗದ್ಗುರು ಶ್ರೀ ಚಂದ್ರಗುಂಡ ಶಿವಾಚಾರ್ಯರಿಂದ ಶೈವದೀಕ್ಷೆ ಪಡೆದರು.

*ಘಟದೊಳಗೆ ತೋರುವ ಸೂರ್ಯನಂತೆ*
*ಸರ್ವರಕ್ಕು ಶಿವನ ಚೈತನ್ಯವಿಪ್ಪುದು*
*ಇದ್ದರೇನು ಅದ ಕೊಡುವರೆ*
*ಗುರುವಿನಿಂದಲ್ಲದಾಗದು ಕಾಣಾ ರಾಮನಾಥ*

ಎಂದು ದಾಸಿಮಯ್ಯನವರು ಗುರುಕರುಣೆಯಿಂದ ತಮ್ಮಲ್ಲಾದ ಪರಿವರ್ತನೆಯನ್ನು ತಿಳಿಸಿದ್ದಾರೆ. ಬಸವಣ್ಣನವರು ದಾಸಿಮಯ್ಯನವರನ್ನು ತಮ್ಮ ವಚನಗಳಲ್ಲಿ ಸ್ಮರಿಸಿದ್ದಾರೆ.




*ಭಕ್ತಿ ಎಂತಹದಯ್ಯ ದಾಸಯ್ಯ ಮಾಡಿದಂತಹದು*
*ಭಕ್ತಿ ಎಂತಹದಯ್ಯ ಸಿರಿಯಾಳ ಮಾಡಿದಂತಹದು*
*ಭಕ್ತಿ ಎಂತಹದಯ್ಯ ಸಿಂಧುಬಲ್ಲಾಳ ಮಾಡಿದಂತಹದು*
*ಭಕ್ತಿ ಎಂತಹದಯ್ಯ ಕೂಡಲ ಸಂಗಮದೇವ*
*ನೀ ಬಾಣಾ ಬಾಗಿಲು ಕಾಯ್ದಂತಹದು.*

ಭಕ್ತಿಯ ಮಹತ್ವವನ್ನು ದಾಸಿಮಯ್ಯ ಮೊದಲಾದ ವ್ಯಕ್ತಿಗಳ ಉಲ್ಲೇಖದೊಂದಿಗೆ ಭಕ್ತಿಯ ವೈಶಿಷ್ಟ್ಯವನ್ನು ಅರಿತ ಮಹಾನುಭಾವಿ ಎಂದು ಸ್ತುತಿಗೆ ಒಳಪಡಿಸಿದ್ದಾರೆ. ದಾಸಿಮಯ್ಯ ತವನಿಧಿಯನ್ನು ಪಡೆದ ವಿಚಾರವನ್ನು ಬಸವಣ್ಣನವರು ತಮ್ಮ ವಚನವೊಂದರಲ್ಲಿ ಪ್ರಸ್ತಾಪಿಸಿದ್ದಾರೆ.

*ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣ*
*ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯ ಕಾಣಿರಣ್ಣ*
*ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣ*
*ದಾಸನ ವಸ್ತ್ರವ ಸೀಳಿದಂದಿದ ಭಯ ಕಾಣಿರಣ್ಣ*
*ಅಘಟಿತ ಘಟಿತರು ವಿಪರೀತ ಚರಿತರು*
*ಕೂಡಲಸಂಗಮ ಶರಣರು ನಡೆದ ದಾರಿ ಭಯ ಕಾಣಿರಣ್ಣ*

ತವನಿಧಿ ಎಂದರೆ ಅಕ್ಷಯ ಪಾತ್ರೆ. ಅದರಿಂದ ಬೇಕಾದಷ್ಟು ದವಸ ಧಾನ್ಯ ದೊರಕುತ್ತಿತ್ತು. ತವನಿಧಿಯಿಂದ ದಾಸೋಹ ಕಾರ್ಯವನ್ನು ಸಾಂಗವಾಗಿ ಸಾಗುತ್ತದೆ. ದಾಸಿಮಯ್ಯ ತವನಿಧಿಯನ್ನು ಶಿವನಿಂದ ಪಡೆದ ಬಗ್ಗೆಯೂ ಒಂದು ಕಥೆಯಿದೆ. ಒಮ್ಮೆ ದಾಸಿಮಯ್ಯ ಸುಂದರವಾದ ವಸ್ತ್ರವನ್ನು ನೇಯ್ದು ಮಾರಾಟ ಮಾಡಲು ಸಂತೆಗೆ ಹೋಗುತ್ತಾರೆ. ಸಂಜೆಯಾದರೂ ವ್ಯಾಪಾರವಾಗಲಿಲ್ಲ. ಆಗ ಶಿವನೇ ಜಂಗಮ ರೂಪಿಯಾಗಿ ಬಂದು ವಸ್ತ್ರವನ್ನು ಕೊಂಡು ದಾಸಿಮಯ್ಯನ ಎದುರಿನಲ್ಲೇ ಹರಿದುಹಾಕಿದನಂತೆ. ಆದರೆ ದಾಸಿಮಯ್ಯ ಯಾವುದೇ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸದೆ ನಿಶ್ಚಲನಾಗಿ ನಿಂತಿದ್ದರಂತೆ.

ಆಗ ಶಿವನು ದಾಸಿಮಯ್ಯ ಧರೆಯಲ್ಲಿ ನಿನ್ನಿಂದಾಗಬೇಕಾದ ಲೋಕಕಲ್ಯಾಣ ಕಾರ್ಯಗಳು ಬಹಳಷ್ಟಿದೆ. ಕರ್ತವ್ಯ ಪೂರ್ಣಗೊಳ್ಳುತ್ತಿರುವಂತೆಯೇ ನಿನ್ನ ಅವತಾರ ಸಮಾಪ್ತಿಯಾಗುತ್ತದೆ. ಇದು ತವನಿಧಿ. ಇದರಲ್ಲಿ ದವಸದಾನ್ಯಗಳು ಬತ್ತುವುದಿಲ್ಲ. ನೀನು ಬಯಸುವ ಪದಾರ್ಥವನ್ನು ತುಂಬಿ ಕೊಡುತ್ತದೆ. ಇದನ್ನು ಸಾಧುಸಂತರ ದಾಸೋಹಕ್ಕೂ ಸತ್ಕಾರ್ಯಕ್ಕೂ ಉಪಯೋಗಿಸು ಎಂದನಂತೆ.

*ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ*
*ಆಸೆ ಮಾಡ ನೋಡ ಅನ್ಯ ದೈವಂಗಳಿಗೆ*
*ದೇಶದ ಪಿಶಾಚಗಳಿಗೆ ಆಸೆ ಮಾಡ ನೋಡ*
*ಆಸೆ ಮಾಡಿದನಾದಡೆ ಅವ ದಾಸನ ಕುಲವಲ್ಲ*
*ಅವ ಅನ್ಯ ಕುಲ ಕಾಣ ರಾಮನಾಥ*

ಶಿವನು ಶರಣನಾಗಿ ಬಂದು ಬೇಡುವೆನು ಎಂಬ ನಂಬುಗೆ ಅಂದಿನ ಸಮಾಜದಲ್ಲಿ ದಟ್ಟವಾಗಿರಬಹುದು. ಶರಣರಿಗೆ ಇತ್ತರೆ ಅದು ಶಿವನಿಗೆ ಇತ್ತ ಪರಿಕಲ್ಪನೆ ಧರ್ಮದ ಹಿರಿಮೆ. ದಾಸಿಮಯ್ಯನು ಶರಣರ ರೂಪಿನಿಂದ ಬಂದ ಶಿವನಿಗೆ ವಸ್ತ್ರದಾನ ಮಾಡಿದ ಕಥೆಯು ಬಸವಣ್ಣನವರ ಕಾಲದಲ್ಲಿ ಮಹತ್ವ ಪಡೆದು ಮನೆಮಾತಾಗಿತ್ತು.

*ಇಳೆ ನಿಮ್ಮ ದಾನ ಬೆಳೆ ನಿಮ್ಮದಾನ*
*ಸುಳಿಯ ಬೀಸುವ ವಾಯು ನಿಮ್ಮದಾನ*
*ನಿಮ್ಮ ದಾನವನುಂಡು ಅನ್ಯರ ಹೊಗಳುವ*
*ಕುನ್ನಿಗಳನೇನೆಂಬೆ ರಾಮನಾಥ*

ದಾಸಿಮಯ್ಯ ಆದ್ಯ ವಚನಕಾರ. ಬಸವಾದಿ ಶರಣರಿಗೆ ಸ್ಪೂರ್ತಿದಾಯಕ. ದಾಸಿಮಯ್ಯನ ಬಗ್ಗೆ ಪ್ರಸ್ತಾಪ ಮಾಡಿದವರಲ್ಲಿ ಬಸವಣ್ಣನವರು ಮೊದಲಿಗರು. ಭಕ್ತಿಯಿಲ್ಲದ ಬಡವ ನಾನಯ್ಯ ಎಂದು ಹೇಳಿ ದಾಸಿಮಯ್ಯನ ಮನೆಯಲ್ಲೂ ಬೇಡಿದೆ ಎಲ್ಲಾ ಪುರಾತನರು ನೆರೆದು ಭಕ್ತಿಯ ಭಿಕ್ಷವನಿಕ್ಕಿದರೆ ಎನ್ನ ಪಾತ್ರೆ ತುಂಬಿತು ಎನ್ನುತ್ತಾರೆ ಭಕ್ತಿ ಭಂಡಾರಿ ಬಸವಣ್ಣನವರು. ಬೆಂಗಳೂರಿನ ಗೋಸಿ ಯೂನಿವರ್ಸ್‌ನ ಸುನಂದ ಅರುಣಕುಮಾರ್ ಗೋಸಿರವರು ದಾಸಿಮಯ್ಯನವರ ಎಲ್ಲಾ 176 ವಚನಗಳನ್ನು ಖ್ಯಾತ ಗಾಯಕ/ಗಾಯಕರಿಂದ ವಚನ ಗಾಯನ ಭಾವಾರ್ಥ ವಿಡಿಯೋ ಮಾಡಿಸಿ ಪೇಸ್ ಬುಕ್‌ನಲ್ಲಿ ಹಾಕಿ ಇಂಡಿಯನ್ ಬುಕ್ ಆಫ್ ರೆಕಾರ್ಡ್-2025 ದಾಖಲೆ ಮಾಡಿದ್ದಾರೆ.

**- ಗೊರೂರು ಅನಂತರಾಜು, ಹಾಸನ.**

# ಕೆಲವು ಹಾಸ್ಯ ಪ್ರಸಂಗಗಳು...

**ಹಳೇಮನೆ**

ಅಮ್ಮ ಹೊರಗಡೆ ಗೇಟಿನ ಹತ್ತಿರ ನಿಂತು ಯಾರ ಬಳಿಯೋ ಮಾತನಾಡುತ್ತಿದ್ದುದು ಕೇಳಿ, ನಾನೂ ಹೊರಗೆ ಬಂದೆ ಅಮ್ಮನ ಹತ್ತಿರ ಏನೋ ಕೇಳಿ ಆ ದಂಪತಿ ಮುಂದೆ ಹೋಗುತ್ತಿದ್ದರು. 'ಏನಂತೆ?' ಎಂದು ಕೇಳಿದೆ. ಅದಕ್ಕೆ ಅಮ್ಮ, ಹಳೇಮನೆ ಬೇಕಾಗಿತ್ತಂತೆ ಅವರಿಗೆ ಇಲ್ಲಿ ಎಲ್ಲೂ ಹಳೇಮನೆ ಸಿಗಲ್ಲ. ಹೀಗೇ ಮುಂದೆ ಅರ್ಧ ಮೈಲು ನಡೆದುಕೊಂಡೆ ಹೋಗಿ, ಅಲ್ಲಿ ಒಂದೆರಡು ಇವೆ. ಅಂತ ಹೇಳಿದೆ' ಅಂದಳು. ಅಷ್ಟು ಹೊತ್ತಿಗೆ ಆ ದಂಪತಿ ವಾಪಾಸ್ಸು ಬಂದರು. 'ಮೇಡಂ, ಹಳೇಮನೆಯವರು ಇಲ್ಲೇ ಎಲ್ಲೊ ಇದ್ದಾರೆ. ಅಂತ ಹೇಳಿದರು ಆ ಕಡೆಯವರು. ಹೋದ ವಾರ ಬಾಡಿಗೆಗೆ ಬಂದಿದ್ದಾರೆ ನೋಡಿ. ಅವರ ಮನೆ ಕೇಳಿದ್ದಿ...' ಎಂದರು. ನಾನು ನಗುತ್ತಲೇ ನಮ್ಮ ಮನೆಯ ಎದುರು ಮನೆಯನ್ನು ತೋರಿಸಿದೆ.

**- ಸು. ವಿಜಯಲಕ್ಷ್ಮಿ**

★★★

**ಸ್ವಾದಿಷ್ಟ ಪಶು ಆಹಾರ!**

ಆರನೇ ತರಗತಿಯಲ್ಲಿ ಓದುತ್ತಿರುವ ನನ್ನ ಸೋದರಿಯ ಮಗಳು ಅಂಶಿಯ ಜೊತೆ ಕಾರ್ಕಳದ ಪೇಟೆ ಸುತ್ತಾಡಲು ಹೋಗಿದ್ದೆ. ಒಂದೆಡೆ ಅಂಗಡಿಯ ಮುಂದೆ, ಒಂದು ಜಾಹೀರಾತು ಫಲಕದಲ್ಲಿ, 'ಸ್ವಾದಿಷ್ಟ ಹಾಗೂ ಪೌಷ್ಟಿಕ ಪಶು ಆಹಾರ' ಎಂಬುದಾಗಿ ಪಶು ಆಹಾರದ ಬ್ರ್ಯಾಂಡ್ ಒಂದರ ಜಾಹೀರಾತು ಹಾಕಲಾಗಿತ್ತು. ಅದನ್ನು ಓದಿದವಳೇ ಅಂಗಡಿಯವನಿಗೆ, ' ಈ ಆಹಾರ ಸ್ವಾದಿಷ್ಟವೆಂದು ಯಾರು ಹೇಳಿದರು? ಪಶುಗಳು ಬಂದು ಹೇಳಿದವಾ? ಅಥವಾ ನೀನೇ ರುಚಿ ನೋಡಿದ್ರಾ?' ಎಂದು ಕೇಳಿದರು. ಅಂಗಡಿಯವ ಉತ್ತರಿಸದೇ ಸುಮ್ಮನೇ ನಿಂತ. ಈ ಆಹಾರವನ್ನು ಪಶುಗಳು ಇಷ್ಟಪಟ್ಟು ತಿನ್ನುವುದನ್ನು ನೋಡಿ ಹಾಗೆ ಬರೆದಿರಬೇಕು' ಎಂದು ಹೇಳಿದ ಮೇಲೆ ಸುಮ್ಮನಾದಳು. ಅಂಗಡಿಯವ ನೆಮ್ಮದಿಯ ನಿಟ್ಟುಸಿರು ಬಿಟ್ಟ

**-ರಮಣ್ ಶೆಟ್ಟಿ ರೆಂಜಾಳ್**

★★★

**ಬ್ಯಾಗಿನ ಫಜೀತಿ**


ಬಹಳ ಹಿಂದಿನ ಘಟನೆ. ನಮ್ಮ ತಾಯಿ ನಿಧನವಾದ ಬಳಿಕ ಅವರ ಕಾರ್ಯ ಮಾಡಲು ಕುಟುಂಬದವರೆಲ್ಲ ಗೋಕರ್ಣಕ್ಕೆ ತೆರಳಿದ್ದೆವು. ಕಾರ್ಯ ಮುಗಿದ. ಬಳಿಕ ಭದ್ರಾವತಿಗೆ ತೆರಳಲು ಬಸ್ ನಿಲ್ದಾಣದಲ್ಲಿ ಕಾಯುತ್ತಿದ್ದೆವು. ನಮ್ಮ ಭಾವ ಬುಕ್ ಅಂಗಡಿಗೆ ಹೋಗಿ ಗೋಕರ್ಣ ಮಹಾತ್ಮಾ ಪುಸ್ತಕ ಹಾಗೂ ಕ್ಯಾಲೆಂಡರ್ ತೆಗೆದುಕೊಂಡು ಅಂಗಡಿಯವರೇ ಕೊಟ್ಟ ಚೀಲದಲ್ಲಿ ಹಾಕಿಕೊಂಡು ಬಂದು. ಅದನ್ನು ಅಕ್ಕನ ಕೈಗೆ ಕೊಟ್ಟರು. ಸ್ವಲ್ಪ ಸಮಯದ ಬಳಿಕ ನಾನು ಚೀಲದಲ್ಲಿ ಕೈಹಾಕಿ ಆ ಪುಸ್ತಕವನ್ನು ತೆಗೆದುಕೊಂಡು ಓದಲು ತೊಡಗಿದೆ. ಎದುರುಗಡೆಯಿಂದ ಒಬ್ಬ ವ್ಯಕ್ತಿ ತದೇಕ ಚಿತ್ತದಿಂದ ನನ್ನನ್ನು ನೋಡುತ್ತಿದ್ದ. ಇವನೇಕೆ ಹೀಗೆ ನೋಡುತ್ತಿದ್ದಾನೆ ಎಂದು ಸಿಟ್ಟಿನಿಂದ ಅವನನ್ನು ದುರುಗುಟ್ಟಿ ಹಾಗೇ ಪುಸ್ತಕವನ್ನು ಬ್ಯಾಗಿನಲ್ಲಿ ತುರುಕಲು ಹೋದೆ. ಅದರಲ್ಲಿ ಪಟ್ಟೆ ಪಟ್ಟೆ ನಿಕ್ಕರ್ ಕಂಡು, 'ಇದ್ಯಾರದೆ?' ಎಂದು ಅಕ್ಕನಿಗೆ ಕೇಳಿದೆ. 'ಆ ಬ್ಯಾಗು ನಮ್ಮದಲ್ಲ' ಅಂದಳು. ಕತ್ತೆತ್ತಿ ನೋಡಿದರೆ ದುರದುರ ನೋಡುತ್ತ ಎದುರಿಗೆ ಬಂದ ವ್ಯಕ್ತಿ ನನ್ನ ಕೈಯಲ್ಲಿದ್ದ ಬ್ಯಾಗನ್ನು ಕಿತ್ತುಕೊಂಡು ಬೇರೆ ಕಡೆ ಹೋದ. ಇಬ್ಬರಲ್ಲೂ ಅದೇ ಅಂಗಡಿಯಿಂದ ಬಂದ ಅದೇ ಬ್ಯಾಗಾದ್ದರಿಂದ ಹೀಗಾಯ್ತು.

**- ಭಾರತೀ ಗಂಗಾಧರ್**

# ಬಿಳೀ ಹೊಟ್ಟೆಯ ಮಠ ಪಕ್ಷಿ

ಎರಡು ದಿನಗಳ ಹಿಂದೆ ಚಾಂದ್ರಮಾನ ಯುಗಾದಿ ಆಯ್ತಲ್ಲ, ಹೀಗೇ ಹತ್ತು ವರ್ಷದ ಹಿಂದೆ ಇದೇ ಚಾಂದ್ರಮಾನ ಯುಗಾದಿ ವಾರದ ಮಧ್ಯೆ ಬಂದಿತ್ತು. ನಮ್ಮ ಮನೆಯಲ್ಲಿ ಸೌರಮಾನ ಯುಗಾದಿ ಆಚರಣೆ ಇರುವುದರಿಂದ ಹಬ್ಬಕ್ಕಾಗಿ ಮನೆಗೆ ಬಂದುಹೋಗುವ ಅವಸರವೂ ಇರಲಿಲ್ಲ. ಎಲ್ಲಾದರೂ ಚಾರಣ ಹೋಗೋಣ ಎಂಬ ಯೋಚನೆ ಬಂತು. ಚಾರಣ ಹೋಗುವಾಗ ಎಂದರೆ ಯಾರಾದರೂ ಜೊತೆಗಿದ್ದರೆ ಚೆನ್ನಾಗಿರುತ್ತದೆ ಎಂದು ಹಲವರನ್ನು ಕೇಳಿದೆ. ಎಲ್ಲರೂ ಹಬ್ಬದ ಬಿಜಿಯಲ್ಲಿದ್ದರು. ನಮ್ಮ ಶಾಲಾ ಚಿತ್ರಕಲಾ ಶಿಕ್ಷಕರಾದ ಸಲೀಂ ಸರ್ ನಾನು ಬರುತ್ತೇನೆ ಎಂದು ಉತ್ಸಾಹದಿಂದಲೇ ಒಪ್ಪಿದರು.

ಸಂಸೆಯಿಂದ ಎಳನೀರು ಜಲಪಾತ ಸಿಗುವ ಮಾರ್ಗದಲ್ಲಿ ನಡೆದು ದಿಡುಪೆ ಸೇರುವುದು ನಮ್ಮ ಗುರಿಯಾಗಿತ್ತು. ಬೇಸಗೆಯಲ್ಲಿ ಜೀಪ್ ಮಾತ್ರ ಕಷ್ಟದಲ್ಲಿ ಹೋಗುವ ದಾರಿ, ಆನೆಗಳು ತಿರುಗಾಡುತ್ತವೆ ಸ್ವಲ್ಪ ಎಚ್ಚರವಾಗಿರಿ ಎಂದು ಹೇಳಿದ್ದರು. ಆದ್ದರಿಂದ ಅರಣ್ಯ ಇಲಾಖೆಯ ಅನುಮತಿ ಪಡೆದೇ ಹೊರಟಿದ್ದೆವು. ಕಳಸದಲ್ಲಿ ತಿಂಡಿ ತಿಂದು ಮಧ್ಯಾಹ್ನಕ್ಕೆ ಬೇಕಾದಷ್ಟು ಚಪಾತಿ ಕಟ್ಟಿಕೊಂಡು ಕ್ಯಾಮರಾ ಮೊದಲಾದ ಸಲಕರಣೆಗಳನ್ನು ತೆಗೆದುಕೊಂಡು ಸಂಸೆ ಕಡೆಗೆ ಹೋಗುವ ಬಸ್ಸಿಗಾಗಿ ಕಾಯುತ್ತ ನಿಂತೆ. ಸಲೀಂ ಸರ್ ಕೂಡಾ ತಯಾರಾಗಿ ಬಂದಿದ್ದರು. ಬಸ್ ಹತ್ತಿ ಸಂಸೆಯಲ್ಲಿ ಇಳಿದು ಐಟಿಐ ಕಾಲೇಜಿನ ಮಾರ್ಗವಾಗಿ ಎಳನೀರು ಘಾಟಿಯ ಕಡೆ ನಡೆಯಲಾರಂಭಿಸಿದೆವು. ಸುಮಾರು ಎರಡು ಕಿಲೋಮೀಟರ್ ನಡೆದಮೇಲೆ ದಾರಿ ಎರಡು ಪಾಲಾಗುತ್ತದೆ. ಒಂದು ಗುತ್ಯಡ್ಕದ ಕಡೆ ಇನ್ನೊಂದು ಎಳನೀರಿನ ಕಡೆ. ಎಳನೀರು ಜಲಪಾತದ ದಾರಿ ಹಿಡಿದೆವು. ನಿಧಾನಕ್ಕೆ ಇಳಿಜಾರು ಮಾರ್ಗ, ಕೆಳಗೆ ಆಳವಾದ ಕಣಿವೆ, ಆ ಕಣಿವೆಗಳಿಂದ ಎದ್ದು ಸೂರ್ಯನನ್ನು ನೋಡಲು ಮೇಲೇರಿ ಬಂದ ದೊಡ್ಡ ಮರಗಳು. ಬೆಳಗಿನ ಚಂದದ ಬಿಸಿಲು



ಅವುಗಳ ಎಡೆಯಿಂದ ಹೊರಟು ಚಂದದ ಚಪ್ಪರ ಮಾಡಿದ್ದವು.

ಹಕ್ಕಿಗಳ ಚಿಲಿಪಿಲಿ ಜೋರಾಗಿಯೇ ಇತ್ತು. ಅಷ್ಟರಲ್ಲಿ ತುಂಬ ಪರಿಚಿತವಾದ ಹಕ್ಕಿಯೊಂದರ ಧ್ವನಿ. ಜೋರಾಗಿ ಕೂಗುತ್ತಾ ನಮ್ಮಕಡೆಗೆ ಬರುವುದು ಕೇಳಿಸಿತು. ಕಣಿವೆಯ ಇಳಿಜಾರಿನಲ್ಲಿ ನಡೆಯುತ್ತಿದ್ದ ನಮ್ಮ ಮುಂದಿನ ದೊಡ್ಡ ಮರದ ಕೊಂಬೆಯ ಮೇಲೆ ಎರಡು ಹಕ್ಕಿಗಳು ಬಂದು ಕುಳಿತವು. ನೋಡಲು ಊರಿನಲ್ಲಿ ಸಾಮಾನ್ಯವಾಗಿ ಕಾಣಸಿಗುವ ಮಠಪಕ್ಷಿ ಅಥವಾ ಕುದುಗನ ಹಕ್ಕಿಯನ್ನೇ ಹೋಲುತ್ತಿತ್ತು. ಆದರೆ ಮೈಬಣ್ಣ, ಗಾತ್ರದಲ್ಲಿ ಬಹಳ ವ್ಯತ್ಯಾಸ ಇತ್ತು. ಬಹಳ ಚಂದದ ಬಿಳೀ ಬಣ್ಣದ ದೇಹ. ಒಲೆಯೊಳಗೆ ತಲೆ ಹಾಕಲು ಹೋಗಿ ಸುಟ್ಟುಕೊಂಡಂತೆ ಕಪ್ಪುಬಣ್ಣದ ಮುಖ, ಇಡೀ ದೇಹದ ಅರ್ಧದಷ್ಟಕ್ಕೂ ಹೆಚ್ಚು ಉದ್ದದ ಬಾಲ. ಬಿಳೀ ಬಣ್ಣದ ಬಾಲದ ತುದಿಯಲ್ಲಿ ಕಪ್ಪು ಬಣ್ಣ, ಬೆನ್ನಿನ ಭಾಗ ಚಂದದ ಕಂದುಬಣ್ಣ. ರೆಕ್ಕೆಗಳ ಹೊಳೆಯುವ ಕಪ್ಪು ಬಣ್ಣದ ನಡುವೆ ಬಿಳೀ ಮಚ್ಚೆ. ಇಡೀ ದೇಹ ಸುಮಾರು ಅರ್ಧ ಮೀಟರ್ ಆಗಬಹುದಾದಷ್ಟು ಉದ್ದ. ಅಚ್ಚ ಹಸುರಿನ ಕಾಡಿನ ನಡುವೆ ಈ ಹಕ್ಕಿಯ ಬಣ್ಣ ನೋಡುವುದು ಬಹಳ ಸೊಗಸಾಗಿತ್ತು.

ಅದರ ಫೋಟೋವನ್ನು ನಮ್ಮ ಪಕ್ಷಿವೀಕ್ಷಕರ ಗುಂಪಿನಲ್ಲಿ ಹಾಕಿದಾಗ ತಿಳಿದ್ದು ಇದು ಗೋವಾದಿಂದ ಕೇರಳದವರೆಗಿನ ಪಶ್ಚಿಮಘಟ್ಟದ ಎತ್ತರವಾದ ಪ್ರದೇಶದ ಕಾಡುಗಳಲ್ಲಿ ಮಾತ್ರ ನೋಡಲು ಸಿಗುವ ಹಕ್ಕಿ. ಈ ಹಕ್ಕಿ ನೋಡುತ್ತ ಸುಮಾರು ಹೊತ್ತು ಹೋದದ್ದೇ ತಿಳಿಯಲಿಲ್ಲ. ಅಲ್ಲಿಂದ ಮುಂದೆ ಹೀಗೇ ಚಂದದ ಕಾಡು ನೋಡುತ್ತ ಸುರಕ್ಷಿತವಾಗಿ ದಿಡುಪೆ ತಲುಪಿ, ಅಲ್ಲಿಂದ ಬೆಳ್ತಂಗಡಿಗೆ ಬಂದು ಬಸ್ಸಿನಲ್ಲಿ ಮರಳಿ ಕಳಸ ತಲುಪಿದಾಗ ರಾತ್ರಿಯಾಗಿತ್ತು. ಆದರೆ ಕಾಡಿನಲ್ಲಿ ಮಾತ್ರ ನೋಡಲು ಸಿಗುವ ಅಪರೂಪದ ಹಕ್ಕಿ ನೋಡಿದ ಸಂತೋಷ ಇನ್ನೂ ಕಣ್ಣ ಮುಂದೆ ಕಟ್ಟಿದಂತಿದೆ.

**- ಅರವಿಂದ ಕುಡ್ಲ,** ಬಂಟ್ವಾಳ

# ನೈತಿಕತೆ, ಸಾಹಿತ್ಯ ಮತ್ತು ಜ್ಞಾನಪೀಠ ಪ್ರಶಸ್ತಿ

*ಭಾರತ ಸಾಹಿತ್ಯದ ನೋಬೆಲ್ ಎಂದೇ ಹೆಸರಾದ ಜ್ಞಾನಪೀಠ ಪ್ರಶಸ್ತಿ ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿ ಮಾತ್ರವಲ್ಲ, ಅದನ್ನು ಪಡೆದ ವ್ಯಕ್ತಿಗಳು ಆಯಾ ಭಾಷೆಯ ದಾರ್ಶನಿಕರು, ಮಾರ್ಗದರ್ಶಕರು, ಸಾಹಿತ್ಯ ಮತ್ತು ಸಾಂಸ್ಕೃತಿಕ ರಾಯಭಾರಿಗಳು, ಆದರ್ಶ ವ್ಯಕ್ತಿಗಳು, ಮಾದರಿ ವ್ಯಕ್ತಿತ್ವದವರು ಆಗುವುದು ಮಾತ್ರವಲ್ಲದೇ, ಅವರ ಭಾವಚಿತ್ರಗಳು ಶಾಲಾ-ಕಾಲೇಜಿನಿಂದ ಹಿಡಿದು ಅನೇಕ ಸಂಘ ಸಂಸ್ಥೆಗಳು ಗೋಡೆಗೆ ಅಲಂಕಾರವಾಗುತ್ತಾರೆ. ಜೊತೆಗೆ ಪೀಳಿಗೆಯಿಂದ ಪೀಳಿಗೆ ಅವರನ್ನು ಪರಿಚಯಿಸುತ್ತಾ, ಕಲಿಸುತ್ತಾ, ಅನುಕರಿಸುತ್ತಾ ಮುನ್ನಡೆಯಲಾಗುತ್ತದೆ. ಇಂತಹ ಜ್ಞಾನಪೀಠ ಪ್ರಶಸ್ತಿ ಒಂದು ಬಹುದೊಡ್ಡ ತೂಕವನ್ನು ಹೊಂದಿದೆ.*

*ಜ್ಞಾನಪೀಠ ಪ್ರಶಸ್ತಿ ಇಲ್ಲದ ಸಮಯದಲ್ಲೂ ಈ ದೇಶದಲ್ಲಿ ಅತ್ಯದ್ಭುತ ಸಾಹಿತಿಗಳು ಇದ್ದರು. ಆದರೆ ಅಧಿಕೃತವಾಗಿ ಸ್ವಾತಂತ್ರ್ಯ ನಂತರ ಜ್ಞಾನಪೀಠ ಪ್ರಶಸ್ತಿ ಪ್ರಾರಂಭವಾದ್ದರಿಂದ ಆ ನಂತರದ ಸಾಹಿತಿಗಳಿಗೆ ಮಾತ್ರ ಒಂದು ದೊಡ್ಡ ಅಧಿಕೃತ ಮಾನ್ಯತೆ ದೊರೆತಿದೆ. ಅದಕ್ಕಾಗಿಯೇ ಆ ಪ್ರಶಸ್ತಿಗೆ ಎಲ್ಲಾ ರಾಜಕೀಯ, ಸೈದ್ಧಾಂತಿಕ, ಸಾಂಸ್ಕೃತಿಕ ನಿಲುವು ಗಳನ್ನು ಮೀರಿ ಗೌರವಾನ್ವಿತ ಮಾನ್ಯತೆ ಇದೆ.*

*1961 ರಲ್ಲಿ ಸ್ಥಾಪಿತವಾದ ಜ್ಞಾನಪೀಠ ಪ್ರಶಸ್ತಿ ಇಲ್ಲಿಯವರೆಗೆ ಸುಮಾರು 65 ಜನರಿಗೆ ಸಂದಿದೆ. ಮೊನ್ನೆಯಷ್ಟೇ ಪ್ರಕಟವಾದ ತಮಿಳಿನ ವೈರಮುತ್ತು ಅವರೇ ಈ ಪ್ರಶಸ್ತಿ ಪಡೆದ 66ನೆಯವರು. ತಮಿಳು ಭಾಷೆಯ ಮೂರನೆಯವರು. ಇಡೀ ಭಾರತದಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಭಾಷೆ ಕನ್ನಡ. ಇಲ್ಲಿಯವರೆಗೆ ಎಂಟು ಪ್ರಶಸ್ತಿಗಳು ಕರ್ನಾಟಕಕ್ಕೆ ಸಂದಿವೆ. ಹಿಂದಿ ಭಾಷೆಗೆ ಏಳು, ಬಂಗಾಳಿ ಭಾಷೆಗೆ ಆರು ಪ್ರಶಸ್ತಿಗಳು ಬಂದಿದೆ.*

*ಯಾವುದೇ ಪ್ರಶಸ್ತಿಗಳು, ಯಾರಿಗೇ ಬಂದರು ಆಗಾಗ ಕೆಲವೊಮ್ಮೆ ಒಂದಷ್ಟು ವಿವಾದಗಳು ಹುಟ್ಟಿಕೊಳ್ಳುವುದು ನಮ್ಮ ಸಮಾಜದಲ್ಲಿ ಅತ್ಯಂತ ಸಹಜವಾಗಿದೆ. ಕೇವಲ ಜ್ಞಾನಪೀಠ ಪ್ರಶಸ್ತಿ ಮಾತ್ರವಲ್ಲ, ಪದ್ಮ ಪ್ರಶಸ್ತಿಗಳು, ಭಾರತ ರತ್ನ ಪ್ರಶಸ್ತಿ, ಅರ್ಜುನ್ ಪ್ರಶಸ್ತಿ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಯಾವುದೇ ಇರಲಿ ಅಥವಾ ಯಾವುದೇ ಅಧಿಕಾರ, ಅಕಾಡೆಮಿಗಳ ಅಧ್ಯಕ್ಷತೆ ಇರಲಿ, ಇಡೀ ವಿಶ್ವದ ಬೃಹತ್ ಜನಸಂಖ್ಯೆಯ ಈ ದೇಶದಲ್ಲಿ ಸ್ಪರ್ಧಿಗಳು ಕೂಡ ಹೆಚ್ಚಾಗಿರುವುದರಿಂದ ಒಂದಷ್ಟು ವಿವಾದಗಳು ಚರ್ಚೆಗೆ ಬರುವುದೂ ಅಷ್ಟೇ ಸಹಜ. ಅದರಲ್ಲೂ ಸಾಮಾಜಿಕ ಜಾಲತಾಣಗಳ ಈ ಮಾಯಾಲೋಕದೊಳಗೆ ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಇರುವುದರಿಂದ ಎಲ್ಲರೂ ಅಭಿಪ್ರಾಯ ಮಂಡಿಸುತ್ತಾರೆ.*

*ಈಗ ತಮಿಳುನಾಡಿನ ಜನಪ್ರಿಯ ಸಿನಿಮಾ ಸಾಹಿತಿ, ಬರಹಗಾರ ವೈರಮುತ್ತು ಅವರ ವಿಷಯದಲ್ಲಿ ಎರಡು ವಿವಾದಗಳು ಚರ್ಚೆಯಾಗುತ್ತಿವೆ. ಒಂದು ಅವರ ವೈಯಕ್ತಿಕ ವ್ಯಕ್ತಿತ್ವ ಹಾಗೂ ಅವರ ಮೇಲೆ ಇರುವ ಮಹಿಳೆಯರ ಲೈಂಗಿಕ ದೌರ್ಜನ್ಯದ ಆರೋಪ, ಮತ್ತೊಂದು ಅವರದು ಮನರಂಜನಾ ಉದ್ಯಮದ ಜನಪ್ರಿಯ ಸಾಹಿತ್ಯ. ವಾಸ್ತವ ನೆಲೆಯ ಸಾಂಸ್ಕೃತಿಕ ಸಾಹಿತ್ಯದ ತೂಕ ಅವರ ಬರಹಗಳಿಗಿಲ್ಲ ಎಂಬುದು.*

*ಯಾವುದೇ ಕ್ಷೇತ್ರದ, ಯಾವುದೇ ವ್ಯಕ್ತಿಯ, ಯಾವುದೇ ಸಾಮರ್ಥ್ಯ, ಪ್ರತಿಭೆ, ಸಾಧನೆ, ಅಧಿಕಾರ, ಪ್ರಶಸ್ತಿ ನಿಜಕ್ಕೂ ಪರಿಪೂರ್ಣಗೊಳ್ಳುವುದು ಆತನ ನೈತಿಕ ವ್ಯಕ್ತಿತ್ವದ ಆಧಾರದ ಮೇಲೆ. ಅಂದರೆ ಸಾರ್ವಜನಿಕವಾಗಿ ನೀವು ಎಷ್ಟು ಜನಪ್ರಿಯ ರಾಗುತ್ತೀರಿ, ನೀವು ಸಮಾಜದ ಮೇಲೆ ಎಷ್ಟು ಪ್ರಭಾವ ಬೀರುತ್ತೀರಿ ಅದನ್ನು ನಾಗರೀಕ ಲಕ್ಷಣಗಳ ಮೇಲೆ ಅವಲೋಕಿಸಿದಾಗ ತಮ್ಮ ವ್ಯಕ್ತಿತ್ವ ಅತ್ಯಂತ ಉನ್ನತ ಮಟ್ಟದಲ್ಲಿ ಇರಬೇಕು. ಅನೈತಿಕ ವ್ಯಕ್ತಿಗಳು ಸಹ ಸಮಾಜದಲ್ಲಿ ದೊಡ್ಡ ಪ್ರಶಸ್ತಿ, ಅಧಿಕಾರ, ಜನಪ್ರಿಯತೆ ಪಡೆಯಬಹುದು. ಆದರೆ ಅವರನ್ನು ಆದರ್ಶ ವ್ಯಕ್ತಿ, ಮಾದರಿ ವ್ಯಕ್ತಿ ಎಂದು ಪರಿಗಣಿಸುವುದಿಲ್ಲ. ಹಾಗೆಯೇ ಆ ತರಹದ ವ್ಯಕ್ತಿಗಳು ಉನ್ನತ ಸ್ಥಾನಕ್ಕೇರಿದಾಗ ಸಮಾಜ ಅದನ್ನು ಖಂಡಿಸಬೇಕು. ಇಲ್ಲದಿದ್ದರೆ ಪ್ರಖ್ಯಾತರಿಗಿಂತ ಕುಖ್ಯಾತರೇ ಸಮಾಜದ ಮುಖ್ಯ ವಾಹಿನಿಗೆ ಬಂದಾಗ ಆ ಸಮಾಜದ ನೈತಿಕತೆ ಕುಸಿಯುತ್ತದೆ.*

*ಈ ಹಿನ್ನೆಲೆಯಲ್ಲಿ ವೈರಮುತ್ತು ಅವರನ್ನು ಸ್ಥಳೀಯ ಸಮಾಜ ಹೇಗೆ ಕಾಣುತ್ತದೆ, ಹೇಗೆ ಮಾನ್ಯತೆ ನೀಡುತ್ತದೆ ಎಂಬುದು ಹೀಗಿರುವ ಒಂದು ಕುತೂಹಲ. ಅವರ ಮೇಲೆ ಇರುವುದು ಆಕಸ್ಮಿಕವಾಗಿ ದಾಖಲಾದ ಯಾವುದೋ ಒಂದೋ, ಎರಡೋ ವೈಯಕ್ತಿಕ, ಕೌಟುಂಬಿಕ ಲೈಂಗಿಕ ಹಗರಣಗಳಲ್ಲ. ಬರೋಬ್ಬರಿ 18 ಮಹಿಳೆಯರು ಇವರ ಮೇಲೆ ಗಂಭೀರ ಆರೋಪ ಮಾಡಿದ್ದಾರೆ.*




*ಅಕ್ಷರ ಸಾಹಿತ್ಯ, ಅನುಭವ ಸಾಹಿತ್ಯ, ಅನುಭಾವ ಸಾಹಿತ್ಯ,*

*ಅಕ್ಷರ ಸಾಹಿತ್ಯ : ಅಕ್ಷರಗಳನ್ನು ಕಲಿತಿರುವ ಕಾರಣದಿಂದ ಏನಾದರೂ ಬರೆಯಬೇಕು ಎಂಬ ಹಂಬಲದಿಂದ ಬರೆಯುತ್ತಾ ಹೋಗುವುದು ಅಕ್ಷರ ಸಾಹಿತ್ಯ. ಇಲ್ಲಿ ಅಕ್ಷರಗಳದೇ ಪ್ರಾಬಲ್ಯ. ಅಕ್ಷರಗಳಿಂದಲೇ ಭಾವನೆಗಳನ್ನು, ಕಲ್ಪನೆಗಳನ್ನು, ಅನುಭವಗಳನ್ನು, ಮಾಹಿತಿಗಳನ್ನು ಇತ್ಯಾದಿ ಎಲ್ಲಾ ಪ್ರಕಾರದ ಬರಹಗಳನ್ನು ಮೂಡಿಸುತ್ತಾ ಹೋಗುವುದು. ತನಗೆ ತಿಳಿದಿರುವ ಅಥವಾ ತನ್ನ ಜ್ಞಾನದ ಮಿತಿಯಲ್ಲಿ ಬರೆಯುವುದು. ಇದರಲ್ಲಿ ಅಕ್ಷರದ ಅಥವಾ ಪದಗಳ ಲಾಲಿತ್ಯವೇ ಮೇಲುಗೈ ಪಡೆದಿರುತ್ತದೆ ಜೊತೆಗೆ ತನ್ನ ಬುದ್ಧಿಯ ಪ್ರದರ್ಶನವೂ ಸೇರಿರುತ್ತದೆ. ನನ್ನ ವೈಯಕ್ತಿಕ ಅನಿಸಿಕೆಯ ಪ್ರಕಾರ ಇದರಲ್ಲಿ ಹೆಚ್ಚು ಜೀವ ಇರುವುದಿಲ್ಲ. ಒಣ ಅಥವಾ ಶುಷ್ಕ ವಾತಾವರಣದ ರೀತಿಯಲ್ಲಿ ಈ ಬರಹಗಳು ಇರುತ್ತವೆ. ಇದರಲ್ಲಿ ಹೆಚ್ಚು ಆಳವಾದ ಅಥವಾ ಅಧ್ಯಯನದ ಒಳ ಅರ್ಥಗಳು ಗೋಚರಿಸುವ ಸಾಧ್ಯತೆ ಕಡಿಮೆ. ನಿರೂಪಣೆಯೇ ಇಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ.*

*ಅನುಭವ ಸಾಹಿತ್ಯ, ಅಕ್ಷರ ಜ್ಞಾನದ ಜೊತೆಗೆ ಬದುಕಿನ ಅನುಭವದ ಆಧಾರದ ಮೇಲೆ ಬರೆಯುವ ಪ್ರಕಾರ. ಅಂದರೆ ಇಲ್ಲಿ ಅನುಭವಗಳಿಗೆ ಅಕ್ಷರದ ರೂಪ ನೀಡುವುದು. ಒಂದಷ್ಟು ಅಧ್ಯಯನ ಚಿಂತನೆಗಳು ಇಲ್ಲಿ ಅಡಕವಾಗಿರುವ ಸಾಧ್ಯತೆ ಇರುತ್ತದೆ. ಬರೆಯುವ ತುಡಿತ ಹೆಚ್ಚಾಗಿರುತ್ತದೆ. ಆ ಅಕ್ಷರಗಳಲ್ಲಿ ಜೀವಂತಿಕೆಯ ಲಕ್ಷಣಗಳನ್ನು ಗುರುತಿಸಬಹುದು.*

*ಅಕ್ಷರಗಳಿಂದ ಅನುಭವದ ರೂಪ ಕೊಡು ವುದಕ್ಕಿಂತ ಅನುಭವವನ್ನು ಅಕ್ಷರಗಳಲ್ಲಿ ಹಿಡಿದಿಡು ವುದು ಸಾಹಿತ್ಯಿಕವಾಗಿ ಉತ್ತಮ ಗುಣಮಟ್ಟವನ್ನು ಮುಟ್ಟಲು ಸಾಧ್ಯವಾಗುತ್ತದೆ. ಅನುಭಾವ ಸಾಹಿತ್ಯ, ರವಿ ಕಾಣದ್ದನ್ನು ಕವಿ ಕಂಡ ಎಂಬ ನಾಣ್ಣುಡಿಯನ್ನು ಇದು ನೆನಪಿಸುತ್ತದೆ. ಅಕ್ಷರ ಜ್ಞಾನದ ಜೊತೆಗೆ ಅನುಭವವೂ ಸೇರಿ ಅದರಿಂದ ಮೇಲೇರಿ ಇನ್ನಷ್ಟು ಆಳವನ್ನು ಹುಡುಕುತ್ತಾ ಒಳನೋಟಗಳನ್ನು, ವಿವಿಧ ಮುಖಗಳನ್ನು ಗ್ರಹಿಸುತ್ತ, ಬರೆಯುತ್ತಾ ಹೋಗು ವುದು ಅನುಭಾವ ಸಾಹಿತ್ಯ. ತುಂಬಾ ಸೂಕ್ಷ್ಮ ಮತ್ತು ದೂರ ದೃಷ್ಟಿ ಇದರಲ್ಲಿ ಸಿಗುತ್ತದೆ. ಅಧ್ಯಯನ ಮತ್ತು ಚಿಂತನೆಯೂ ಇಲ್ಲಿ ಅಡಕವಾಗಿರುತ್ತದೆ. ಇದರಲ್ಲಿ ಜೀವ ಮೈತುಂಬಿ ಹರಿಯುತ್ತದೆ..*

*ಬರಹಗಳಲ್ಲಿ ಸಹ ಗುಣಮಟ್ಟವನ್ನು ಅಳೆಯ ಬಹುದು. ಅನೇಕ ಬರಹಗಳು ಕಾಲದ ಅಗ್ನಿ ಪರೀಕ್ಷೆಯಲ್ಲಿ ಗೆದ್ದು ಈಗಲೂ ಪ್ರಸ್ತುತವಾಗಿ ಉಳಿದಿರು ವುದಕ್ಕೆ ಕಾರಣ ಅವುಗಳ ಆಳದಲ್ಲಿ ಇರುವ ಅನುಭಾವ. ಅದು ಅಕ್ಷರ ಸಾಹಿತ್ಯ ದಾಟಿ ಅನುಭವ ಸಾಹಿತ್ಯ ಮೀರಿ ಅನುಭಾವ ಸಾಹಿತ್ಯವಾಗಲಿ ಎಂಬುದು ಒಂದು ಆಶಯ. ಇದರಲ್ಲಿ ವೈರಮುತ್ತು ಅವರದು ಯಾವ ರೀತಿಯ ಸಾಹಿತ್ಯ ಎಂಬ ಪ್ರಶ್ನೆ ಎದ್ದಿದೆ. ನಿಜವಾದ ಸಾಹಿತ್ಯ ಮಾನವೀಯತೆಯ ವಿಕಾಸವಾದದ ಕುರುಹುಗಳಾಗಿ ಉಳಿಯಬೇಕೇ ಹೊರತು ಶಿಕ್ಷಣ ಆಧಾರಿತ ಮಾನವೀಯ ಮೌಲ್ಯಗಳ ವಿನಾಶದ ಮಾರ್ಗವಾಗಬಾರದು. ಇದೊಂದು ಸರಳ ನಿರೂಪಣೆ. ಸಾಹಿತ್ಯದ ಆಳ ಅಗಲಗಳು ಅನಂತ. ಬದುಕು ಮತ್ತು ಬರಹ ಎಷ್ಟು ಹತ್ತಿರ ಮತ್ತು ಎಷ್ಟು ದೂರ ಎಂಬ ಎಳೆಯ ಹಿಂದೆ ಒಂದು ಹುಡುಕಾಟ.*

-ವಿವೇಕಾನಂದ. ಎಚ್.ಕೆ., ಬೆಂಗಳೂರು

# 30 ದಿನಗಳ ಕಾಲ ನಿರ್ಬಂಧ ಸಡಿಲಿಕೆ ಘೋಷಣೆ

## ಜಗತ್ತಿನಲ್ಲಿ ಹೆಚ್ಚುತ್ತಿರುವ ತೈಲ ಬೆಲೆ ಏರಿಕೆ ತಡೆಗೆ ಅಮೆರಿಕದಿಂದ ಮಹತ್ವದ ನಿರ್ಧಾರ

• ಪ್ರಜೋದಯ ವರದಿ

**ವಾಷಿಂಗ್ಟನ್:** ಇರಾನ್ ಮತ್ತು ಇಸ್ರೇಲ್ -ಅಮೆರಿಕ ನಡುವಿನ ಸಂಘರ್ಷದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ತಲೆದೋರಿರುವ ತೈಲ ಅಭಾವ ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸಲು ಟ್ರಂಪ್ ಆಡಳಿತವು ಮಹತ್ವದ ಕ್ರಮ ಕೈಗೊಂಡಿದೆ. ಸಮುದ್ರದಲ್ಲಿ ಸಿಲುಕಿರುವ ಇರಾನ್‌ನ ಕಚ್ಚಾ ತೈಲದ ಮಾರಾಟಕ್ಕೆ ಅನ್ವಯವಾಗುವಂತೆ 30 ದಿನಗಳ ಕಾಲ ನಿರ್ಬಂಧ ಸಡಿಲಿಕೆ ಘೋಷಿಸಲಾಗಿದೆ.

ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಈ ಕುರಿತು ಮಾಹಿತಿ ನೀಡಿದ್ದು, ''ಸಮುದ್ರದಲ್ಲಿ ಹಡಗುಗಳಲ್ಲಿರುವ ಸುಮಾರು 140 ಮಿಲಿಯನ್ ಬ್ಯಾರೆಲ್ ಇರಾನ್ ತೈಲವನ್ನು ಜಾಗತಿಕ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು. ಈ ನಿರ್ಧಾರವು ತಕ್ಷಣವೇ ಜಾರಿಗೆ ಬರಲಿದ್ದು, ಏಪ್ರಿಲ್ 19 ರವರೆಗೆ ಈ ವಿನಾಯಿತಿ ಇರಲಿದೆ,'' ಎಂದು ತಿಳಿಸಿದ್ದಾರೆ. ಚೀನಾವು ಇರಾನ್‌ನ ತೈಲವನ್ನು ಅಗ್ಗದ ದರದಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿರುವುದನ್ನು ತಡೆಯುವುದು



ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಪೂರೈಕೆ ಹೆಚ್ಚಿಸುವುದು ಇದರ ಹಿಂದಿನ ಉದ್ದೇಶವಾಗಿದೆ ಎಂದು ತಿಳಿದು ಬಂದಿದೆ.

**ಆಪರೇಷನ್ ಎಪಿಕ್ ಫ್ಯೂರಿ ಮುಂದುವರಿಕೆ**

''ಇರಾನ್ ಜಾಗತಿಕ ಭಯೋತ್ಪಾದನೆಯ ಕೇಂದ್ರಬಿಂದುವಾಗಿದೆ. ಅಧ್ಯಕ್ಷ ಟ್ರಂಪ್ ಅವರ ಆಪರೇಷನ್ ಎಪಿಕ್ ಫ್ಯೂರಿ ಮೂಲಕ ನಾವು ಈ ಹೋರಾಟದಲ್ಲಿ ನಿರೀಕ್ಷೆಗಿಂತ ವೇಗವಾಗಿ ಯಶಸ್ಸು ಸಾಧಿಸುತ್ತಿದ್ದೇವೆ. ಇರಾನ್‌ನ ತೈಲವನ್ನೇ ಅಸ್ತ್ರವಾಗಿ ಬಳಸಿ ಜಾಗತಿಕ ಇಂಧನ ಮಾರುಕಟ್ಟೆಯನ್ನು ಸ್ಥಿರಗೊಳಿಸುವುದು ನಮ್ಮ ಗುರಿ,'' ಎಂದು ಬೆಸೆಂಟ್ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಫೆಬ್ರವರಿ 28 ರಿಂದ ಆರಂಭವಾದ ಇರಾನ್ ಮೇಲಿನ ಸರಣಿ ವೈಮಾನಿಕ ದಾಳಿಗಳು ಇನ್ನೂ ಮುಂದುವರಿದಿವೆ. ಇರಾನ್ ಕೂಡ ತಿರುಗೇಟು ನೀಡುತ್ತಿದ್ದು, ಜಾಗತಿಕ ಪ್ರವಾಸಿ ತಾಣಗಳ ಮೇಲೆ ದಾಳಿ ನಡೆಸುವ ಬೆದರಿಕೆ ಹಾಕಿದೆ. ಯುದ್ಧದ ಹಿನ್ನೆಲೆಯಲ್ಲಿ ತೈಲ ಬೆಲೆ ಗಗನಕ್ಕೇರಿದ್ದು, ಇದು ಅಮೆರಿಕದ ಷೇರು ಮಾರುಕಟ್ಟೆಯ ಮೇಲೂ ನಕಾರಾತ್ಮಕ ಪರಿಣಾಮ ಬೀರಿದೆ.

ಈ ಆರ್ಥಿಕ ಸಂಕಷ್ಟದಿಂದ ಪಾರಾಗಲು ಟ್ರಂಪ್ ಸರ್ಕಾರ ಈಗ ಇರಾನ್ ತೈಲದ ಮೇಲಿನ ನಿರ್ಬಂಧವನ್ನು ತಾತ್ಕಾಲಿಕವಾಗಿ ಸಡಿಲಿಸಿದೆ.

★ ಏಪ್ರಿಲ್ 19 ರವರೆಗೆ ಇರಾನ್ ತೈಲ ಮಾರಾಟಕ್ಕೆ ಅಮೆರಿಕದ ಅನುಮತಿ.
★ ಜಾಗತಿಕ ತೈಲ ಬೆಲೆ ಇಳಿಸುವ ಉದ್ದೇಶದಿಂದ 140 ಮಿಲಿಯನ್ ಬ್ಯಾರೆಲ್ ತೈಲ ಮಾರುಕಟ್ಟೆಗೆ.
★ ಇರಾನ್‌ನ ನೌಶಾದ್ ಮತ್ತು ಇಂಧನ ಮೂಲಗಳ ಮೇಲೆ ಅಮೆರಿಕ– ಇಸ್ರೇಲ್ ತೀವ್ರ ದಾಳಿ.
★ ಯುದ್ಧದ ನಡುವೆಯೇ ಪರ್ಶಿಯನ್ ಹೊಸ ವರ್ಷ ನೌರೂಜ್ ಆಚರಿಸುತ್ತಿರುವ ಇರಾನಿಗಳು.

# 'ಶ್ರೀ ಚಾಮುಂಡೇಶ್ವರಿ' ಗೀತೆಗೆ ಮನಸೋತ ಮೋದಿ

• ಪ್ರಜೋದಯ ವರದಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಡಾ.ರಾಜ್‌ಕುಮಾರ್ ಅಭಿನಯದ ಶ್ರೀ ಕೃಷ್ಣದೇವರಾಯ ಚಿತ್ರದ 'ಶ್ರೀ ಚಾಮುಂಡೇಶ್ವರಿ' ಗೀತೆಯನ್ನು ಹಂಚಿಕೊಂಡಿದ್ದಾರೆ. ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಶ್ಲಾಘಿಸಿರುವ ಅವರ ಈ ಪೋಸ್ಟ್‌ಗೆ ಕರುನಾಡಿನ ಜನರಿಂದ ಮತ್ತು ಅಣ್ಣಾವ್ರ ಅಭಿಮಾನಿಗಳಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು, ಇದಾಗಲೇ ಹಲವು ಬಾರಿ ಕನ್ನಡದ ಬಗ್ಗೆ, ಕರುನಾಡಿನ ಪರಂಪರೆಯ ಬಗ್ಗೆ ಸಾಕಷ್ಟು ಬಾರಿ ಶ್ಲಾಘನೆ ವ್ಯಕ್ತಪಡಿಸಿದ್ದು ಇದೆ. ತಮ್ಮ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಇದರ ಬಗ್ಗೆ ಬರೆದುಕೊಂಡಿರುವುದು ಇದೆ. ಬಸವಣ್ಣನವರ ವಚನಗಳನ್ನು ಉಲ್ಲೇಖಿಸುವುದರಿಂದ ಹಿಡಿದು ರಾಜ್ಯದ ತಾಂತ್ರಿಕ ಮತ್ತು ಕಲಾತ್ಮಕ ಮೈಲಿಗಲ್ಲುಗಳನ್ನು ಶ್ಲಾಘಿಸುವವರೆಗೆ, ಪ್ರಧಾನಿ ಮೋದಿ ಕರ್ನಾಟಕದ ಪರಂಪರೆಯೊಂದಿಗೆ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ.



ಇದೀಗ ಪ್ರಧಾನಿ, ತಮ್ಮ ಎಕ್ಸ್ ಖಾತೆಯಲ್ಲಿ, ಡಾ.ರಾಜ್‌ಕುಮಾರ್ ಅವರು ಹಾಡಿರುವ ಚಿತ್ರದ ಹಾಡೊಂದನ್ನು ಶೇರ್ ಮಾಡಿಕೊಳ್ಳುವ ಮೂಲಕ, ಅವರ ಅಸಂಖ್ಯ ಅಭಿಮಾನಿಗಳ ಸಂತಸಕ್ಕೆ ಕಾರಣರಾಗಿದ್ದಾರೆ. ಕರುನಾಡಿನ ಜನರು ಪ್ರಧಾನಿಗೆ ಧನ್ಯವಾದ ಸಲ್ಲಿಸುತ್ತಿದ್ದಾರೆ.

**'ಶ್ರೀ ಕೃಷ್ಣದೇವರಾಯ' ಚಿತ್ರದ ಗೀತೆ**

ಸಾಂಸ್ಕೃತಿಕ ಪ್ರತಿಮೆಯಾದ ಶ್ರೀ ಚಾಮುಂಡೇಶ್ವರಿ ಗೀತೆ ಇದಾಗಿದೆ. 1970ರ 'ಶ್ರೀ ಕೃಷ್ಣದೇವರಾಯ' ಚಿತ್ರದ ಈ ಹಾಡು ಜಗನ್ಮಾತೆಯ ಮೇಲಿನ ನಂಬಿಕೆಯನ್ನು ಸಾರುತ್ತದೆ. ಶ್ರೀ ಚಾಮುಂಡೇಶ್ವರಿ.. ಹಾಡನ್ನು ಪಿ.ಲೀಲಾ, ಎಸ್. ಗೋವಿಂದರಾಜು ಹಾಡಿದ್ದಾರೆ. ಪ್ರಭಾಕರ ಶಾಸ್ತ್ರಿ ಅವರು ಹಾಡಿಗೆ ಸಾಹಿತ್ಯ ಬರೆದಿದ್ದಾರೆ. ಟಿಜಿ ಲಿಂಗಪ್ಪ ಅವರು ಹಾಡಿಗೆ ಸಂಗೀತ ನೀಡಿದ್ದಾರೆ. ರಾಜ್‌ಕುಮಾರ್, ಜಯಂತಿ, ಭಾರತಿ, ನರಸಿಂಹರಾಜು ಅವರು ಈ ಸಿನಿಮಾದಲ್ಲಿ ನಟಿಸಿದ್ದಾರೆ. ಎಕ್ಸ್ ಖಾತೆಯಲ್ಲಿ ಈ ಹಾಡನ್ನು ಹಂಚಿಕೊಂಡಿರುವ ಪ್ರಧಾನಿ ಮೋದಿ, ಭಾರತ ದೇಶದ ಆಧ್ಯಾತ್ಮಿಕ ಪರಂಪರೆ, ದೇವಿ ಆರಾಧನೆ ಮತ್ತು ಶಕ್ತಿ ಉಪಾಸನೆಯ ಮಹತ್ವವನ್ನು ತಮ್ಮ ಸಂದೇಶದಲ್ಲಿ ಉಲ್ಲೇಖಿಸಿದ್ದಾರೆ. ವಿಶ್ವಮಾತೆಯ ಮೇಲಿನ ಅಚಲ ಭಕ್ತಿ, ಭಕ್ತರಲ್ಲಿ ಹೊಸ ಚೇತನ ಮತ್ತು ಉತ್ಸಾಹವನ್ನು ಉಂಟುಮಾಡುತ್ತದೆ ಎಂಬ ಸಂದೇಶದೊಂದಿಗೆ ಅವರು ಈ ಹಾಡನ್ನು ಹಂಚಿಕೊಂಡಿದ್ದಾರೆ.

**ಭಾರಿ ಪ್ರತಿಕ್ರಿಯೆ**

ವಿಶೇಷವಾಗಿ ನಾಡದೇವತೆ ಎಂದೇ ಕರೆಯಲ್ಪಡುವ ಮೈಸೂರಿನ ಆರಾಧ್ಯ ದೇವತೆ ಚಾಮುಂಡೇಶ್ವರಿ ಕುರಿತು ಪ್ರಧಾನಿ ಮೋದಿ ಮಾಡಿದ ಈ ಪೋಸ್ಟ್‌ಗೆ ಸಾಮಾಜಿಕ ಜಾಲತಾಣದಲ್ಲಿ ಭಾರಿ ಪ್ರತಿಕ್ರಿಯೆ ವ್ಯಕ್ತವಾಗಿದೆ.

# ಬಿಜೆಪಿ ಕಚೇರಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನ

• ಪ್ರಜೋದಯ ವರದಿ

**ಹಾಸನ:** ವಿಶ್ವದಾದ್ಯಂತ ಮಹಿಳೆಗೆ ವಿಶೇಷ ಸ್ಥಾನಮಾನ ನೀಡಲಾಗಿದೆಯೆ ಎಂದು ಕನ್ನಡ ಸೇನೆ ಚಿಕ್ಕಮಗಳೂರು ಜಿಲ್ಲಾಧ್ಯಕ್ಷೆ ಚೈತ್ರಾ ಎಸ್.ಗೌಡ ಅವರು ಹೇಳಿದರು.

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಪಕ್ಷದ ಮಹಿಳಾ ಘಟಕದಿಂದ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಪ್ರಕೃತಿಯೇ ಸಹಜವಾಗಿ ಹೆಣ್ಣಿಗೆ ಅತ್ಯುತ್ತಮ ಕೊಡುಗೆ ನೀಡುತ್ತಾ ಬಂದಿದೆ. ನೈಸರ್ಗಿಕವಾಗಿ ಗರ್ಭಪಾತವಾಗುವ ಎಲ್ಲಾ ಮಕ್ಕಳು ಗಂಡು ಮಕ್ಕಳೇ ಆಗಿರುತ್ತಾರೆಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಆದ್ದರಿಂದ ಸ್ತ್ರೀಯರಿಗೆ ಗೌರವ ನೀಡುವುದನ್ನು ಕಲಿಯಬೇಕು ಎಂದರು.

ಹಿಂದೂ ಹೆಣ್ಣು ಮಕ್ಕಳು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರು ಹೋಗಿ ಮೂಲ ಪರಂಪರೆ ಮರೆಯುತ್ತಿರುವುದು ವಿಷಾದನೀಯ. ಸನಾತನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕೆಂದರು.



ಬಿಜೆಪಿ ಜಿಲ್ಲಾ ಮಹಿಳಾ ಘಟಕ ಅಧ್ಯಕ್ಷೆ ನೇತ್ರಾ ಮಂಜುನಾಥ್, ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ರಂಜಿತ್ ಶೆಟ್ಟಿ, ರಾಜಕುಮಾರ ಇತರರಿದ್ದರು.

## ಬೇಲೂರು ತಾಲ್ಲೂಕು ಛಾಯಾಗ್ರಾಹಕರ ಸಂಘದಿಂದ ಗುರುತಿನ ಚೀಟಿ ವಿತರಣೆ

# ಐಡಿ ಕಾರ್ಡ್‌ಗಳ ಮೂಲಕ ವೃತ್ತಿಪರತೆಗೆ ಮತ್ತಷ್ಟು ಗೌರವ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಛಾಯಾಗ್ರಾಹಕರ ಸಂಘದ ವತಿಯಿಂದ ಸದಸ್ಯರಿಗೆ ಗುರುತಿನ ಚೀಟಿ (ಐಡಿ ಕಾರ್ಡ್) ವಿತರಣೆ ಕಾರ್ಯಕ್ರಮವನ್ನು ಪಟ್ಟಣದ ನೌಕರ ಭವನದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಸಂಘದ ಹಿರಿಯ ಸದಸ್ಯರು ಉದ್ಘಾಟಿಸಿ, ನಂತರ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಸಂಘದ ಎಲ್ಲಾ ಸದಸ್ಯರಿಗೆ ಕ್ರಮವಾಗಿ ಐಡಿ ಕಾರ್ಡ್‌ಗಳನ್ನು ವಿತರಿಸಿದರು.

ಐಡಿ ಕಾರ್ಡ್‌ಗಳನ್ನು ವಿತರಿಸಿ ಮಾತನಾಡಿದ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಚಂದ್ರಶೇಖರ್ ಅವರು, ಛಾಯಾಗ್ರಾಹಕರ ವೃತ್ತಿಗೆ



ಗುರುತಿನ ಮಹತ್ವ ಹೆಚ್ಚುತ್ತಿದ್ದು, ಐಡಿ ಕಾರ್ಡ್‌ಗಳ ಮೂಲಕ ವೃತ್ತಿಪರತೆಗೆ ಮತ್ತಷ್ಟು ಗೌರವ ಮತ್ತು ಭದ್ರತೆ ಸಿಗಲಿದೆ.

ಇಂದು ಛಾಯಾಗ್ರಹಣ ಕ್ಷೇತ್ರವು ತಂತ್ರಜ್ಞಾನ ಅಭಿವೃದ್ಧಿಯೊಂದಿಗೆ ವೇಗವಾಗಿ ಬೆಳೆಯುತ್ತಿದೆ. ಮದುವೆ, ಸಾಮಾಜಿಕ ಕಾರ್ಯಕ್ರಮಗಳು, ಸುದ್ದಿ ವರದಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಛಾಯಾಗ್ರಾಹಕರ ಪಾತ್ರ ಪ್ರಮುಖವಾಗಿದೆ. ಇಂತಹ ಸಂದರ್ಭದಲ್ಲಿ ಸಂಘದ ಸದಸ್ಯರು ಏಕತೆ ಮತ್ತು ಶಿಸ್ತಿನಿಂದ ಕೆಲಸ ಮಾಡುವುದು ಅಗತ್ಯ ಎಂದು ಅವರು ತಿಳಿಸಿದರು.

ಸಂಘದ ಮಾಜಿ ಅಧ್ಯಕ್ಷ ರಾಘವೇಂದ್ರ, ಹೊಳ್ಳ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ನೂತನ ಛಾಯಾಗ್ರಹಕರು ಹೆಚ್ಚಾಗಿ ಬರುತ್ತಿದ್ದು ಅವರಿಗೆ ಸಂಘದ ಮಹತ್ವ ತಿಳಿಯುತ್ತಿಲ್ಲ. ಸದಸ್ಯರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಅಪಘಾತ ವಿಮೆ, ತುರ್ತು ನೆರವು ನಿಧಿ, ತರಬೇತಿ ಶಿಬಿರಗಳು ಹಾಗೂ ನವೀನ ತಂತ್ರಜ್ಞಾನಗಳ ಪರಿಚಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶವಿದೆ.

ಹೊಸದಾಗಿ ಕ್ಷೇತ್ರಕ್ಕೆ ಬರುತ್ತಿರುವ ಯುವ ಛಾಯಾಗ್ರಾಹಕರಿಗೆ ಮಾರ್ಗದರ್ಶನ ನೀಡುವುದು ಸಂಘದ ಪ್ರಮುಖ ಗುರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡು, ಸಂಘದ ಈ ಪ್ರಯತ್ನವನ್ನು ಶ್ಲಾಘಿಸಿದರು. ಐಡಿ ಕಾರ್ಡ್‌ಗಳು ವಿವಿಧ ಕಾರ್ಯಕ್ರಮಗಳಲ್ಲಿ ಪ್ರವೇಶ ಹಾಗೂ ಕೆಲಸ ನಿರ್ವಹಣೆಗೆ ಅನುಕೂಲವಾಗಲಿದ್ದು, ಛಾಯಾಗ್ರಾಹಕರಿಗೆ ವೃತ್ತಿಪರ ಗುರುತು ನೀಡಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಸಂಘದ ಮಾಜಿ ಅಧ್ಯಕ್ಷ ಪ್ರಕಾಶ್, ಉಪಾಧ್ಯಕ್ಷ, ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಸಂದೀಪ್, ಖಜಾಂಚಿ ನವೀನ್, ಕಾರ್ಯಕಾರಿ ಸಮಿತಿ ಸದಸ್ಯರು, ನಿರ್ದೇಶಕರು ಹಾಗೂ ತಾಲ್ಲೂಕಿನ ವಿವಿಧ ಭಾಗಗಳಿಂದ ಆಗಮಿಸಿದ ಛಾಯಾಗ್ರಾಹಕರು ಹಾಜರಿದ್ದರು.

# ಸಕಲೇಶಪುರ ಗಡಿ ಭಾಗದ ರಸ್ತೆಗಳ ಅಭಿವೃದ್ಧಿಗೆ ಚಾಲನೆ

## ಕರಗೂರು ಗ್ರಾಮದ ಪರಿಮಿತಿ: 59 ಲಕ್ಷ ರೂ. ವೆಚ್ಚದಲ್ಲಿ ವಿವಿಧ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

• ಪ್ರಜೋದಯ ವರದಿ

**ಸಕಲೇಶಪುರ:** ಕೊಡಗು ಜಿಲ್ಲೆಯೊಂದಿಗೆ ಗಡಿ ಹಂಚಿಕೊಂಡಿರುವ ತಾಲ್ಲೂಕಿನ ಗಡಿ ಭಾಗದ ಹೊಸೂರು, ಚಂಗಡಿಹಳ್ಳಿ ಹಾಗು ಉಚ್ಚಂಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಅವರು ಶನಿವಾರ ಭೂಮಿಪೂಜೆ ನೆರವೇರಿಸಿದರು.

ತಾಲ್ಲೂಕಿನ ಉಚ್ಚಂಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರಗೂರು ಗ್ರಾಮದ ಪರಿಮಿತಿಯಲ್ಲಿ 59 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ವಿವಿಧ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಅದೇ ರೀತಿ ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಳಲೆ ಗ್ರಾಮದ ಪರಿಮಿತಿಯಲ್ಲಿ 6 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ, ಕಾಡ್ಲೂರು ಗ್ರಾಮದ ಪರಿಮಿತಿಯಲ್ಲಿ 5.5 ಲಕ್ಷ ರೂ .ವೆಚ್ಚದಲ್ಲಿ ರಸ್ತೆ ನಿರ್ಮಾಣ, ಕಾಡ್ಲೂರು ಗ್ರಾಮದಿಂದ ಕಲ್ಲಪ್ಪಳ್ಳಿ ಗ್ರಾಮದವರೆಗೆ 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಕೌಕೋಡಿ ಗ್ರಾಮದ ಬಹುದಿನಗಳ ಬೇಡಿಕೆಯಾಗಿದ್ದ ನೂತನ ರಸ್ತೆಯನ್ನು 7.5 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲು ಚಾಲನೆ ನೀಡಲಾಯಿತು.



ಚಂಗಡಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಕ್ಕನಹಳ್ಳಿ ಗ್ರಾಮದ ಪರಿಮಿತಿಯಲ್ಲಿ 6 ಲಕ್ಷ ರೂ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ನಾಗನಹಳ್ಳಿ ಗ್ರಾಮದ ಪರಿಮಿತಿಯಲ್ಲಿ 16 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ ಹಾಗು ಬೆಕ್ಕನಹಳ್ಳಿ ಮುಖ್ಯ ರಸ್ತೆಯಿಂದ ಮತ್ತೂರು ಹೊಸಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ 30 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಯಿತು.

ಇದೇ ವೇಳೆ ಗ್ರಾಮದ ಕುಂದು ಕೊರತೆಗಳು ಮತ್ತು ಆಗಬೇಕಿರುವ ಅಭಿವೃದ್ಧಿ ಕಾರ್ಯಗಳ ಕುರಿತು ಮಾಹಿತಿ ಪಡೆಯಲಾಯಿತು. ನಾಗನಹಳ್ಳಿ ಗ್ರಾಮದ ಪರಿಮಿತಿಯಲ್ಲಿ 16 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗು ಗ್ರಾಮಸ್ಥರು ಸೇರಿದಂತೆ ಇನ್ನಿತರೆ ಸಾರ್ವಜನಿಕರು ಉಪಸ್ಥಿತರಿದ್ದರು.

# ಕೆ.ಪಿ.ಸಿ.ಸಿ ಕಾರ್ಮಿಕ ವಿಭಾಗದ ಅಧ್ಯಕ್ಷ ಮಧು

• ಪ್ರಜೋದಯ ವರದಿ

**ಹಾಸನ:** ಕೆ.ಪಿ.ಸಿ.ಸಿ ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷ ಪುಟ್ಟಸ್ವಾಮಿ ಗೌಡ ಅವರ ಆದೇಶದ ಮೇರೆಗೆ ಹಾಗೂ ಹಾಸನ ಜಿಲ್ಲಾಧ್ಯಕ್ಷ ಹೇಮಂತ್ ಗೌಡ ಅಂಕಪುರ ಅವರ ಶಿಫಾರಸ್ಸಿನ ಮೇರೆಗೆ, ಹಾಸನ ಜಿಲ್ಲೆಯ ಹಳ್ಳಿ ಮೈಸೂರು ಬ್ಲಾಕ್ ಅಧ್ಯಕ್ಷರಾಗಿ ಮಧು ಹೆಚ್.ಎ. ರವರನ್ನು ನೇಮಕ ಮಾಡಲಾಗಿದೆ.

ನೂತನ ಅಧ್ಯಕ್ಷ ಮಧು ಮಾತನಾಡಿ, ಪಕ್ಷದಕ್ಕಾಗಿ ಕಳೆದ 15 ವರ್ಷಗಳಿಂದ ನಿರಂತರವಾಗಿ ಶ್ರಮಿಸಿದ್ದು. ಪಕ್ಷ ನೀಡಿರುವ ಜವಾಬ್ದಾರಿಗೆ ನಾನು ಅಭಾರಿಯಾಗಿದ್ದೇನೆ, ಈ ಸಮಯದಲ್ಲಿ ಸಂಸದರಾದ ಎಂಪಿ ಶ್ರೇಯಸ್ ಪಟೇಲ್ ಹಾಗೂ ನಮ್ಮ ನಾಯಕರಾದ ಶ್ರೀಧರ್ ಗೌಡ ಅವರಿಗೆ ಧನ್ಯವಾದಗಳು ತಿಳಿಸುತ್ತೇನೆ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನದಲ್ಲಿ ಹಾಗೂ ಹಳ್ಳಿ ಮೈಸೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಿರಿಯ ಮತ್ತು ಸ್ಥಳೀಯ ನಾಯಕರುಗಳ ಸಹಕಾರದೊಂದಿಗೆ ಪಕ್ಷದ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಅವರು ತಿಳಿಸಿದರು.



ವಿಶೇಷವಾಗಿ ಕಾರ್ಮಿಕರು ಮತ್ತು ಅವರ ಏಳಿಗೆಗಾಗಿ ಹಾಗೂ ಅವರ ಹಕ್ಕುಗಳ ರಕ್ಷಣೆಗಾಗಿ ನಿರಂತರವಾಗಿ ಶ್ರಮಿಸುವ ಮೂಲಕ ಪಕ್ಷದ ಬಲವರ್ಧನೆಗೆ ಪ್ರಾಮಾಣಿಕ ಪ್ರಯತ್ನ ಮಾಡ ಲಾಗುವುದು ಎಂದರು.

ಜಿಲ್ಲಾ ನಾಯಕರು ಹಾಗೂ ಅಭಿಮಾನಿಗಳು ಈ ಸಂದರ್ಭದಲ್ಲಿ ಹಾಜರಿದ್ದು ಶುಭ ಹಾರೈಸಿದ್ದಾರೆ.

## ದೃಢೀಕರಣಕ್ಕೆ ಸೂಚನೆ

**ಹಾಸನ:** ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯಲ್ಲಿ ನೋಂದಣಿಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ ಸೀಡೆಡ್ ಬ್ಯಾಂಕ್ ಖಾತೆ ಹೊಂದಿರಬೇಕು. ವೆಬ್ ಸೈಟ್ https://sevasindhugs.karnataka.gov.in ನಲ್ಲಿ ತಮ್ಮ ಅರ್ಜಿಯನ್ನು ಯಾವ ಹಂತದಲ್ಲಿದೆ ಎಂಬುವುದನ್ನು ಪರಿಶೀಲಿಸಿಕೊಂಡು ಹಾಗೂ ಪರಿಶೀಲನೆಗೆ ಬಾಕಿ ಉಳಿದಿರುವ ಅಭ್ಯರ್ಥಿಗಳೂ ಮಾತ್ರ ಸೂಚಿಸಲ್ಪಟ್ಟ ಇಲಾಖೆಯ ಕಚೇರಿಗಳಿಗೆ ತಮ್ಮ ಎಲ್ಲ ಮೂಲ ಅಂಕಪಟ್ಟಿ ಹಾಗು ಇತರೆ ಪ್ರಮಾಣ ಪತ್ರಗಳೊಂದಿಗೆ ಖುದ್ದಾಗಿ ಭೇಟಿ ನೀಡಿ, ಪರಿಶೀಲಿಸಿ ಶೀಘ್ರವಾಗಿ ದೃಢೀಕರಿಸಿಕೊಳ್ಳುವಂತೆ ಪ್ರಕಟಣೆಯಲ್ಲಿ ಸೂಚಿಸಲಾಗಿದೆ.

ಮಾಹಿತಿಗಾಗಿ ದೂ. ಸಂಖ್ಯೆ: 08172-296374 ಸಂಪರ್ಕಿಸುವಂತೆ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

# ದೇವಾಲಯದ ಜಮೀನು ರಕ್ಷಣೆ: ಸನ್ಮಾನ

• ಪ್ರಜೋದಯ ವರದಿ

**ಹಾರನಹಳ್ಳಿ:** ಇಲ್ಲಿನ ಯಳವಾರೆ ಗ್ರಾಮದ ಹುಚ್ಚಮ್ಮ ದೇವಿ ಟ್ರಸ್ಟ್ ಸದಸ್ಯರು ಶನಿವಾರ ದೇವಾಲಯದಲ್ಲಿ ಹುಚ್ಚಮ್ಮ ದೇವಿ ಜಾತ್ರ ಮಹೋತ್ಸವ ನಡೆಸುವ ಬಗ್ಗೆ ಸಭೆ ನಡೆಸಿದರು.

ಮಾಜಿ ಹಾರನಹಳ್ಳಿ ಗ್ರಾಮ ಪಂಚಾಯತಿ ಪ್ರಧಾನರಾದ ರಾಜಣ್ಣ ಅವರನ್ನು ದೇವಾಲಯ ಸಮಿತಿಯವರು ಹಾಗೂ ಟ್ರಸ್ಟ್ ಸದಸ್ಯರುಗಳು ದಂಪತಿಗಳಿಗೆ ಸನ್ಮಾನ ಮಾಡಿ ಗೌರವಿಸಿದರು.

ದೇವಾಲಯದ ಟ್ರಸ್ಟ್ ಸದಸ್ಯ ದೇವರಾಜು ಮಾತನಾಡಿ, ದೇವರ ಜಮೀನನ್ನು ಭೂ ಸುಧಾರಣಾ ಕಾಯ್ದೆಯಲ್ಲಿ ದೇವರ ಜಮೀನು ಬೇರೆಯವರು ಜಮೀನು ಸಾಗುವಳಿ ಮಾಡುತ್ತಿದ್ದರು. ಇವರು ಹೋರಾಟ ಮಾಡಿ ದೇವಾಲಯಕ್ಕೆ ಜಮೀನನ್ನು ಉಳಿಸಲು ಸಹಕಾರ ನೀಡಿದ್ದರು.



ಇದರಿಂದ ದೇವಾಲಯದ ಟ್ರಸ್‌ಗೆ ಜಮೀನು ಉಳಿಯಿತು ಎಂದು ತಿಳಿಸಿದರು.

ರಾಜಣ್ಣ ಅವರು ಮಾತನಾಡಿ, ಅಧಿಕಾರ ಶಾಶ್ವತ ಅಲ್ಲ, ಅಧಿಕಾರ ಇದ್ದಾಗ ಜನಪರ ಸೇವೆ ಮಾಡಿದರೆ ಜನರು ಮತ್ತು ದೇವರು ಮೆಚ್ಚುತ್ತಾರೆ ಎಂದು ಅಭಿಪ್ರಾಯಪಟ್ಟರು.

ಈ ಸಂಧರ್ಭದಲ್ಲಿ ಹುಚ್ಚಮ್ಮದೇವಿ ಟ್ರಸ್ಟ್ ಅಧ್ಯಕ್ಷ ಸ್ವಾಮಿ, ರವಿ ಪೂಜಾರ್ ಕೇಶವಣ್ಣ, ಜಯಣ್ಣ, ನಾಗರಾಜು ಮಹೇಶ್, ದೇವಾಲಯದ ಸದಸ್ಯರುಗಳು ಹಾಗೂ ಗ್ರಾಮಸ್ಥರುಗಳು ಭಾಗವಹಿಸಿದ್ದರು.

# ಶ್ರೀ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಗುದ್ದಲಿಪೂಜೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಕಸಬಾ ಹೋಬಳಿ ಮಳ್ಳೇನಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರೆಲ್ಲ ಕೂಡಿ 14 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಮಾಜಿ ಶಾಸಕ ಸಿ.ಎಸ್. ಪುಟ್ಟೇಗೌಡ ಹಾಗೂ ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್, ಗುದ್ದಲಿಪೂಜೆ ನೆರವೇರಿಸಿ ಶೀಘ್ರ ದೇವಸ್ಥಾನ ನಿರ್ಮಾಣವಾಗಿ ಗ್ರಾಮಸ್ಥರಿಗೆ ಸ್ವಾಮಿ ದರ್ಶನ ಭಾಗ್ಯ ಸಿಗಲಿ ಎಂದು ಹಾರೈಸಿದರು.

ಗ್ರಾಮದ ಮಧ್ಯಭಾಗದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಶಂಕುಸ್ಥಾಪನಾ ಕಾರ್ಯದಲ್ಲಿ ಗುಡಿಭಟ್ಟರ ಕುಟುಂಬಸ್ಥರಿಂದ ಶಾಸ್ತ್ರಕವಾಗಿ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು. ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡರು, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿಆನಂದ್, ಮತ್ತು ಕಾಂಗ್ರೆಸ್ ಯುವಮುಖಂಡ ವಿನೋದ್ ಮಕಾನ್ ಪೂಜಾಕಾರ್ಯದಲ್ಲಿ ಭಾಗಿಯಾಗಿ ದೇವಸ್ಥಾನಕ್ಕೆ ಅಡಿಗಲ್ಲು ಇಟ್ಟು ಪೂಜೆ ಸಲ್ಲಿಸಿದರು.



ನಂತರ ಮಾತನಾಡಿದ ಮಾಜಿ ಶಾಸಕ ಪುಟ್ಟೇಗೌಡರು ದೇವಸ್ಥಾನ ನಿರ್ಮಾಣದ ಸಂಕಲ್ಪ ಮಾಡಿರುವ ನಿಮಗೆ ಯಾವುದೇ ಅಡೆತಡೆ ಆಗದೇ ಶೀಘ್ರ ದೇವಸ್ಥಾನ ನಿರ್ಮಾಣವಾಗಿ ನಿಮ್ಮೆಲ್ಲರಿಗೂ ಭಗವಂತನ ದರ್ಶನ ಸಿಕ್ಕಿ ನಿಮ್ಮೆಲ್ಲ ಕಷ್ಟಗಳೆಲ್ಲಾ ದೂರವಾಗುವಂತಾಗಲಿ ಎಂದು ಅವರು ಶುಭ ಹಾರೈಸಿದರು.

ನಂತರ ಮಾತನಾಡಿದ ಗ್ರಾಮದ ಮುಖಂಡ ಹಾಗೂ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹರೀಶ್ ಮಾತನಾಡಿ, ನಮ್ಮ ಗ್ರಾಮದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಪ್ರಮುಖವಾಗಿ ಗ್ರಾಮದ ಪರಿಶಿಷ್ಟ ಸಮುದಾಯದ ಜನರು ಅತಿಹೆಚ್ಚಿನ ಹಣವನ್ನು ಪ್ರತಿ ಮನೆಗಿಷ್ಟು ಎಂಬುದಾಗಿ ಕ್ರೋಡಿಕರಿಸಿದ್ದಾರೆ. ಇದರೊಂದಿಗೆ ಗ್ರಾಮದ ಹಿರಿಯರು, ಇತರೆ ಸಮುದಾಯದವರು ಸೇರಿ 13.5 ಲಕ್ಷ ಹಣ ಕ್ರೋಡಿಕರಿಸಲಾಗಿದೆ. ಮುಜರಾಯಿ ಇಲಾಖೆಯಡಿ ತಹಶೀಲ್ದಾರ್‌ರವರು ಅನುದಾನ ಕೊಡಿಸುವ ಭರವಸೆ ನೀಡಿದ್ದಾರೆ. ಎಂದರು.

ಮುಖಂಡರಾದ ಸುಬ್ಬಣ್ಣ, ಜಯರಾಮ್, ಕುಶಣ್ಣ, ರಾಜು, ರಂಗಸ್ವಾಮಿ, ಸುರೇಶ್, ಶಿವು, ತಾಲ್ಲೂಕು ಕಛೇರಿ ಕಾಂತರಾಜು ಇದ್ದರು.

## ಜಗತ್ತಿನ ವಿವಿಧ ಭಾಗಗಳಲ್ಲಿ ಮುಸ್ಲಿಮರು ಸಂಕಷ್ಟ -ಯುದ್ಧದ ಕಾರ್ಮೋಡದ ನಡುವೆಯ ಜೀವನ: ವಿಷಾದ

# ಜಗತ್ತಿನಲ್ಲಿ ಶಾಂತಿ, ಸಹಿಷ್ಣುತೆ, ಮಾನವೀಯತೆ ನೆಲೆಸಬೇಕು

• ಪ್ರಜೋದಯ ವರದಿ

**ಸಕಲೇಶಪುರ:** ಜಗತ್ತಿನ ಯಾವುದೇ ಮೂಲೆಯಲ್ಲಿ ಉಂಟಾಗುವ ಸಮಸ್ಯೆಗಳು ಕೇವಲ ಆ ಪ್ರದೇಶದ ಜನರಿಗಷ್ಟೇ ಸೀಮಿತವಾಗಿರುವುದಿಲ್ಲ ಅವು ಮಾನವಕುಲದ ಸಮಗ್ರ ಸಮಸ್ಯೆಗಳಾಗಿವೆ ಎಂಬ ಅರಿವು ನಮ್ಮೆಲ್ಲರಲ್ಲೂ ಇರಬೇಕು ಎಂದು ಜಾಮಿಯಾ ಲಬಾಬಿನ್ ಜುಮಾ ಮಸೀದಿಯ ಇಮಾಮರಾದ ಮುಫ್ತಿ ಮುಹಮ್ಮದ್ ತಲ್ಹಾ ಹೇಳಿದರು.

ಪಟ್ಟಣದ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬದ ವಿಶೇಷ ನಮಾಝ್ ಸಲ್ಲಿಸಿದರು. ಪ್ರಾರ್ಥನೆಯ ಬಳಿಕ ಮಾತನಾಡಿ, ಪ್ರವಾದಿ ತೋರಿಸಿದ ಹಾದಿಯನ್ನು ನಿಷ್ಠೆಯಿಂದ ಅನುಸರಿಸಿದರೆ ಇಹಲೋಕ ಹಾಗೂ ಪರಲೋಕದಲ್ಲಿ ಯಶಸ್ಸು ಸಿಗುತ್ತದೆ. ಪ್ರತಿಯೊಬ್ಬ ಮುಸ್ಲಿಂ ನಿರಂತರವಾಗಿ ಪ್ರಯತ್ನಿಸಬೇಕಾಗಿದೆ ಎಂದು ಹೇಳಿದರಲ್ಲದೆ, ಜಗತ್ತಿನ ವಿವಿಧ ಭಾಗಗಳಲ್ಲಿ ಮುಸ್ಲಿಮರು ಸಂಕಷ್ಟ ಮತ್ತು ಯುದ್ಧದ ಕಾರ್ಮೋಡದ ನಡುವೆ ಜೀವನ ನಡೆಸುತ್ತಿರುವುದು ವಿಷಾದನೀಯ. ಇಂತಹ ಸಂದರ್ಭದಲ್ಲಿ ಜಗತ್ತಿನಲ್ಲಿ ಶಾಂತಿ, ಸಹಿಷ್ಣುತೆ ಮತ್ತು ಮಾನವೀಯತೆ ನೆಲೆಸಬೇಕಾಗಿದೆ. ಎಲ್ಲರೂ ಭ್ರಾತೃತ್ವ ಹಾಗೂ ಸಹೋದರತ್ವವನ್ನು ಅಳವಡಿಸಿಕೊಂಡು ಪರಸ್ಪರ ಪ್ರೀತಿ, ಸಹಕಾರದಿಂದ ಬದುಕಬೇಕು ಎಂದು ಕರೆ ನೀಡಿದರು.

ರಂಜಾನ್ ತಿಂಗಳು ಇಸ್ಲಾಂ ಧರ್ಮದಲ್ಲಿ ಅತ್ಯಂತ ಪವಿತ್ರವಾಗಿದ್ದು, ಈ ಅವಧಿಯಲ್ಲಿ ಮುಸ್ಲಿಮರು ಉಪವಾಸ ಆಚರಿಸುವ ಮೂಲಕ ಆತ್ಮಶುದ್ಧಿ, ಸಹನೆ ಮತ್ತು ಶಿಸ್ತಿನ ಜೀವನವನ್ನು ಅಭ್ಯಾಸ ಮಾಡುತ್ತಾರೆ. ಮುಂಜಾನೆಯಿಂದ ಮುಂಜಾವರವರೆಗೆ ಆಹಾರ ಮತ್ತು ನೀರನ್ನು ತ್ಯಜಿಸುವ ಮೂಲಕ ಭಕ್ತಿ, ನಿಯಮ ಹಾಗೂ ಮಾನವೀಯ ಮೌಲ್ಯಗಳನ್ನು ಅರಿತುಕೊಳ್ಳುತ್ತಾರೆ. ಉಪವಾಸದ ಮೂಲಕ ಬಡವರ ನೋವನ್ನು ಮನಗಂಡು, ಸಹಾನುಭೂತಿ ಮತ್ತು ದಯೆಯನ್ನು ಬೆಳೆಸಿಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು.



ಈ ಸಂದರ್ಭದಲ್ಲಿ ಜಕಾತ್ (ಧಾರ್ಮಿಕ ದಾನ) ನೀಡುವ ಮಹತ್ವವೂ ಅಪಾರವಾಗಿದೆ. ಆರ್ಥಿಕವಾಗಿ ಸಮೃದ್ಧರಾಗಿರುವವರು ತಮ್ಮ ಸಂಪತ್ತಿನ ಒಂದು ಭಾಗವನ್ನು ಬಡವರಿಗೆ, ನಿರ್ಗತಿಕರಿಗೆ ಹಾಗೂ ಅಗತ್ಯವಿರುವವರಿಗೆ ನೀಡುವುದು ಕಡ್ಡಾಯವಾಗಿದೆ. ಇದರಿಂದ ಸಮಾಜದಲ್ಲಿ ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುತ್ತದೆ. ರಂಜಾನ್ ತಿಂಗಳಲ್ಲಿ ದಾನ-ಧರ್ಮಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ ಎಂದರು.

ಹಬ್ಬದ ಪ್ರಯುಕ್ತ ಮನೆಮನೆಗಳಲ್ಲಿ ವಿಶೇಷ ಊಟಗಳನ್ನು ತಯಾರಿಸಿ, ಬಂಧು-ಬಳಗದವರನ್ನು ಆಹ್ವಾನಿಸಿ ಆತಿಥ್ಯ ನೀಡಲಾಯಿತು. ಮಕ್ಕಳು ಹೊಸ ಬಟ್ಟೆ ಧರಿಸಿ ಸಂಭ್ರಮದಿಂದ ಭಾಗವಹಿಸಿದರು. ಒಟ್ಟಿನಲ್ಲಿ ಈದ್ ಉಲ್ ಫಿತರ್ ಹಬ್ಬವು ಸಂತೋಷದಿಂದ ಆಚರಿಸಲಾಯಿತು. ಪಟ್ಟಣದ ಎಲ್ಲ ಜುಮಾ ಮಸೀದಿಗಳು ಮತ್ತು ಈದ್ಗಾಗಳಲ್ಲಿ ಸಾಮೂಹಿಕ ನಮಾಝ್, ಖುತ್ಬಾ ಹಾಗೂ ಪ್ರವಚನಗಳು ನಡೆದವು. ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು, ಪರಸ್ಪರ ಹಸ್ತಲಾಘವ ಮತ್ತು ಆಲಿಂಗನದ ಮೂಲಕ ಸಂತೋಷವನ್ನು ಹಂಚಿಕೊಂಡರು. ಗ್ಯಾರೆಂಟಿ ಅನುಷ್ಠಾನ ಯೋಜನೆಯ ತಾಲೂಕು ಅಧ್ಯಕ್ಷ ಮುರಳಿ ಮೋಹನ್ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮುಸ್ಲಿಂ ಬಾಂಧವರಿಗೆ ಶುಭಾಶಯಗಳನ್ನು ಕೋರಿದರು.

ಪಟ್ಟಣದ ಬದ್ರಿಯಾ ಜುಮಾ ಮಸೀದಿಯಲ್ಲಿ ಅಬ್ದುಲ್ ರಜಾಕ್ ಸಖಾಫಿ ಪ್ರಾರ್ಥನೆಗೆ ನೇತೃತ್ವ ನೀಡಿದರು. ಈದ್ಗಾ ಮೈದಾನದಿಂದ ಪಟ್ಟಣದ ಜಾಮಿಯ ಮಸೀದಿವರೆಗೆ ಸಾವಿರಾರು ಮುಸ್ಲಿಂ ಬಾಂಧವರು ಮೆರವಣಿಗೆ ನಡೆಸಿದರು.

ಈ ಸಂದರ್ಭದಲ್ಲಿ ಜಾಮಿಯಾ ಲಬಾಬಿನ್ ಮಸೀದಿಯ ಅಧ್ಯಕ್ಷ ಅಮ್ಜದ್ ಸಾಬ್, ಬದ್ರಿಯಾ ಜುಮಾ ಮಸೀದಿ ಆಡಳಿತ ಸಮಿತಿಯ ಅಧ್ಯಕ್ಷ ಯಾದ್ಗಾರ್ ಜಾಕೀರ್, ಹುದಾ ಮಸೀದಿಯ ಅಧ್ಯಕ್ಷ ಜಾಕೀರ್, ಆದಂ ಹಾಜಿ ಇನ್ನಿತರರು ಉಪಸ್ಥಿತರಿದ್ದರು.

# ಧರ್ಮಪುರಿಯಲ್ಲಿ ಇಂದಿನಿಂದ ಎನ್‌ಎಸ್‌ಎಸ್ ಶಿಬಿರ

• ಪ್ರಜೋದಯ ವರದಿ

**ಆಲೂರು:** ಸರ್ಕಾರಿ ಕಾಲೇಜು ರಾಷ್ಟ್ರೀಯ ಸೇವಾ ಯೋಜನೆ 2024-25 ನೆ ಶೈಕ್ಷಣಿಕ ಸಾಲಿನ ವಾರ್ಷಿಕ ವಿಶೇಷ ಶಿಬಿರವು ಮಾ.22 ರಿಂದ 28 ರವರೆಗೆ ಕಸಬಾ ಧರ್ಮಪುರಿ ಗ್ರಾಮದಲ್ಲಿ ನಡೆಯಲಿದೆ ಎಂದು ಶಿಬಿರದ ನಿರ್ದೇಶಕ ಹಾಗೂ ಪ್ರಾಂಶುಪಾಲ ಟಿ. ಪಿ. ಪುಟ್ಟರಾಜು ತಿಳಿಸಿದ್ದಾರೆ.

ಮಾ. 22 ರಂದು ಸಂಜೆ 5 ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಶಾಸಕ ಸಿಮೆಂಟ್ ಮಂಜು, ಪ್ರಾಂಶುಪಾಲ ಟಿ. ಪಿ. ಪುಟ್ಟರಾಜು, ನಾಗೇಂದ್ರ ಸೇವಾ ಪ್ರತಿಷ್ಠಾನ ಸಂಸ್ಥಾಪಕ ಸಿದ್ದೇಶ್ ನಾಗೇಂದ್ರ, ಎಪಿಎಂಸಿ ಮಾಜಿ ಅಧ್ಯಕ್ಷ ಮಂಜೇಗೌಡ ಭಾಗವಹಿಲಿದ್ದಾರೆ.

21 ರಂದು ಸಂಜೆ 6.30 ಕ್ಕೆ ಸಾಮಾಜಿಕ ಪಿಡುಗುಗಳು ಕುರಿತು ಡಾ. ಕೆ.ಎಸ್.ಮೋಹನ್‌ಕುಮಾರ್ ಉಪನ್ಯಾಸ ನೀಡಲಿದ್ದಾರೆ. ಆಂಗ್ಲ ಭಾಷ ವಿಭಾಗ ಮುಖ್ಯಸ್ಥ ಕೆ. ಎನ್. ರಮೇಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಜೆ 7 ಕ್ಕೆ ಶಿಕ್ಷಕಿ ಎಚ್. ವೇದಾವತಿ ರವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

24 ರಂದು ಸಂಜೆ 6.30 ಕ್ಕೆ ಅಗ್ನಿ ಅವಘಡಗಳ ಅರಿವು ಹಾಗೂ ಮುಂಜಾಗ್ರತಾ ಕ್ರಮ ಕುರಿತು ಅಗ್ನಿಶಾಮಕ ಪ್ರಭಾರ ಠಾಣಾಧಿಕಾರಿ ಡಿ. ಜಿ. ಮಂಜೇಗೌಡ ಮತ್ತು ಜನಪದ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು ಕುರಿತು ದೇವರಾಜು ಉಪನ್ಯಾಸ ನೀಲಿದ್ದಾರೆ. ಇತಿಹಾಸ ಮುಖ್ಯಸ್ಥ ಜೆ. ಜಿ. ನಟರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ.

25 ರಂದು ಬೆಳಗ್ಗೆ 11 ಕ್ಕೆ ಉಚಿತ ಆರೋಗ್ಯ ಶಿಬಿರ ನಡೆಯಲಿದೆ. ಸಂಜೆ 4 ಕ್ಕೆ ಆರೋಗ್ಯ ಅರಿವು ಕುರಿತು ಡಾ. ಕಿಶೋರ್‌ಕುಮಾರ್ ಉಪನ್ಯಾಸ ನೀಡಲಿದ್ದಾರೆ. ಸಮಾಜಶಾಸ್ತ್ರ ಮುಖ್ಯಸ್ಥ ಶ್ರೀನಿವಾಸ ಅಧ್ಯಕ್ಷತೆ ವಹಿಸಲಿದ್ದಾರೆ.

26 ರಂದು ಬೆಳಗ್ಗೆ 8.30 ಕ್ಕೆ ಉಚಿತ ಜಾನವಾರು ತಪಾಸಣೆ ಶಿಬಿರ ನಡೆಯಲಿದೆ. ಡಾ. ಸೀತಾರಾಮಯ್ಯ, ಡಾ.ಹರ್ಷಿತ ಭಾಗವಹಿಸಲಿದ್ದಾರೆ. ಸಂಜೆ 4 ಕ್ಕೆ ಜೀವನ ಕೌಶಲ್ಯ ತರಬೇತಿ ಕುರಿತು ಹರೀಶ್ ಮಾತನಾಡುತ್ತಾರೆ. ವಾಣಿಜ್ಯಶಾಸ್ತ್ರ ವಿಭಾಗ ಮುಖ್ಯಸ್ಥ ಜಿ. ಪುರುಷೋತ್ತಮ ಅಧ್ಯಕ್ಷತೆ ವಹಿಸಲಿದ್ದಾರೆ.

27 ರಂದು ಬೆಳಗ್ಗೆ 11 ಕ್ಕೆ ಎನ್.ಎಸ್.ಎಸ್. ವಿದ್ಯಾರ್ಥಿಗಳಿಂದ ಪರಿಸರ ಸಂರಕ್ಷಣೆ ಮತ್ತು ಸ್ವಚ್ಚತಾ ಜಾಥಾ ನಡೆಯಲಿದೆ.

# ಕಾಫಿ ಬೆಳೆ ಉಳಿವಿಗೆ ತುಂತುರು ನೀರಾವರಿಗೆ ಮೊರೆ

## ಕೃಪೆ ತೋರದ ವರುಣ | ಸಂಕಷ್ಟದಲ್ಲಿ ಬೆಳೆಗಾರರು

• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡು ಭಾಗದ ಪ್ರಮುಖ ಬೆಳೆಗಳಲ್ಲಿ ಒಂದಾಗಿರುವ ಕಾಫಿಗೆ ಈಗ ನೀರಿನ ಅವಶ್ಯಕತೆ ಹೆಚ್ಚಿದ್ದು ನಿರೀಕ್ಷಿತ ಪ್ರಮಾಣದಲ್ಲಿ ವರುಣ ಕೃಪೆ ತೋರದ ಹಿನ್ನಲೆಯಲ್ಲಿ ಬೆಳೆಗಾರರು ತುಂತುರು ನೀರಾವರಿಗೆ ಮುಂದಾಗುತ್ತಿದ್ದಾರೆ.

ಕಳೆದ ನಾಲ್ಕೈದು ದಿನಗಳ ಹಿಂದೆ ಸ್ವಲ್ಪ ಮಳೆ ಸುರಿದು ಭರವಸೆ ಮೂಡಿಸಿತ್ತಾದರೂ ನಂತರ ಮೋಡ ಹಾಗು ಬಿಸಿಲು ದರ್ಶನವಾಗುತ್ತಿದೆ. ಕಾಫಿ ಹೂವು ಕಾಯಿಯಾಗುವ ಈ ಸಮಯದಲ್ಲಿ ಬೆಳೆಗೆ ನೀರಿನ ಅವಶ್ಯಕತೆ ಹೆಚ್ಚಿದೆ.

ಸಕ್ರಾಂತಿ ಹಬ್ಬದ ಮುನ್ನಾ ದಿನ ತಾಲ್ಲೂಕಿನ ಹಲವೆಡೆ ಮಳೆ ಸುರಿದಿದ್ದು ಬಿಟ್ಟರೆ ಈ ವರೆಗೆ ಉತ್ತಮ ಮಳೆಯಾಗಿಲ್ಲ. ತಾಲ್ಲೂಕಿನಲ್ಲಿ ಹಲವು ಬಾರಿ ಮೋಡ ಮುಸುಕಿದ ವಾತಾವರಣ ನಿರ್ಮಾಣವಾದದರೂ ಮಳೆ ಹನಿ ಭೂಮಿಗೆ ಬೀಳದಾಗಿದೆ. ಜನವರಿ ಮಧ್ಯ ಭಾಗದಲ್ಲಿ ಸುರಿದ ಮಳೆಯಿಂದಾಗಿ ಕಾಫಿ ಗಿಡಗಳಲ್ಲಿ ಜನವರಿ 20 ರಿಂದ 25ರ ವರೆಗೆ ಹೂವು ಮೂಡಿತ್ತು. ಸದ್ಯ ಈ ಹೂವು ಉಳಿಸಿಕೊಳ್ಳ ಬೇಕಾದರೆ ಫೆಬ್ರವರಿ ಮೊದಲ ವಾರ ಅಥವಾ ಎರಡನೇ ವಾರದಲ್ಲಿ ಮತ್ತೊಮ್ಮೆ ಮಳೆಯಾಗ ಬೇಕಿತ್ತು. ಆದರೆ, ಮೊದಲ ಮಳೆ ಸುರಿದು ಮೂರು ತಿಂಗಳು ಸಮೀಪಿಸುತ್ತಾ ಬಂದರು ಎರಡನೇ ಬಾರಿ ಮಳೆಯಾಗದಿರುವುದರಿಂದ ಈಗಾಗಲೇ ಬೆಳೆಗಾರರು ಎರಡರಿಂದ ಮೂರು ಸುತ್ತಿನ ತುಂತುರು ನೀರಾವರಿ ಮಾಡುವಂತೆ



ಮಾಡಿದೆ.

ಒಮ್ಮೆ ತುಂತುರು ನೀರಾವರಿ ಮಾಡಬೇಕಾದರೆ ಬೆಳೆಗಾರರಿಗೆ ಲಕ್ಷಾಂತರ ರೂ. ಖರ್ಚಾ ಗುತ್ತದೆ. ಡೀಸೆಲ್, ವಿದ್ಯುತ್, ಮಾನವ ಶ್ರಮ ಖರ್ಚಾಗುತ್ತಿದೆ. ಈ ಮಧ್ಯೆ ಕೆಲವು ಬೆಳೆಗಾರರಿಗೆ ಈಗಾಗಲೇ ನೀರಿನ ಮೂಲಗಳು ಬರಿದಾಗುತ್ತಿದ್ದು ಮುಂದಿನ ಮಳೆಗಾಲದ ವರೆಗೆ ಗಿಡಗಳನ್ನು ಹಾಗು ಫಸಲನ್ನು ಉಳಿಸಿಕೊಳ್ಳುವ ಚಿಂತೆ ಕಾಡುತ್ತಿದೆ. ಕಡಿಮೆಯಾಗಿದೆ ನೀರಿನ ಹರಿವು:

ಸದ್ಯ ಮಲೆನಾಡಿನಲ್ಲಿ ಬೇಸಿಗೆಯ ಧಗೆ ಆರಂಭದಲ್ಲೇ ಹೆಚ್ಚಿದ್ದು ಏಪ್ರಿಲ್ ತಿಂಗಳ ಬಿಸಿಲನ್ನು ನೆನೆದು ಭಯವಾಗುತ್ತಿದೆ. ಇಂತಹ ಬಿಸಿಲು ಧಗೆಯಲ್ಲಿ ಕಾಫಿ ಗಿಡ ಹಾಗು ಫಸಲನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಸಾಕಷ್ಟು ಬೆಳೆಗಾರರು ಸ್ವಂತ ಜಲ ಮೂಲ ಸಾರ್ವಜನಿಕ ಜಲಮೂಲ ಎನ್ನದೆ ತೋಟಗಳಿಗೆ ನೀರನ್ನು ಎತ್ತುತ್ತಿದ್ದಾರೆ.

ಪರಿಣಾಮ ಹಳ್ಳಕೊಳ್ಳಗಳಲ್ಲಿ ನೀರಿನ ಹರಿವು ಮಾರ್ಚ್ ತಿಂಗಳಿನಲ್ಲೇ ಕಡಿಮೆಯಾಗಿದ್ದು ಇದೆ ಪ್ರಮಾಣದಲ್ಲಿ ನದಿಗಳಿಂದ ನೀರನ್ನೆತ್ತಿದ್ದರೆ ಏಪ್ರಿಲ್‌ನಲ್ಲಿ ಪ್ರಾಣಿ ಪಕ್ಷಿಗಳಿಗೂ ಕುಡಿಯಲು ನೀರಿನ ಅಭಾವ ಸೃಷ್ಟಿಯಾಗಲಿದೆ ಎಂಬ ಆತಂಕ ಜನರಿಂದ ಕೇಳಿ ಬರುತ್ತಿದೆ.

ತಾಲ್ಲೂಕಿನಲ್ಲಿ 40 ಕಿ.ಮೀ. ದೂರದ ವರೆಗೆ ಹೇಮಾವತಿ ಕ್ರಮಿಸುತ್ತಿದ್ದು ಚಿಕ್ಕಮಗಳೂರು ಹಾಗು ಕೊಡಗು ಜಿಲ್ಲೆಗಳನ್ನು ಈ ನದಿ ಸಂಪರ್ಕಿಸುತ್ತದೆ. ಇಷ್ಟು ದೂರು ಹರಿಯುವ ನದಿ ಯಿಂದ ಭಾರೀ ಪ್ರಮಾಣದಲ್ಲಿ ನೀರನ್ನೆತ್ತುತ್ತಿದ್ದು ಅಂದಾಜು 500ಕ್ಕೂ ಅಧಿಕ ಮೋಟಾರ್‌ಗಳಿಂದ ಕಾಫಿ ತೋಟಗಳಿಗೆ ನೀರು ಹರಿಸುತ್ತಿದ್ದಾರೆ. ಪರಿಣಾಮ ಈ ನದಿಯಲ್ಲಿ ನೀರಿನ ಹರಿವು ಕ್ಷೀಣಿಸಲಾರಂಭಿಸಿದೆ. ಮತ್ತೊಂದು ಮುಖ್ಯ ನದಿ ಎತ್ತಿನಹೊಳೆ ಸಹ ಬರಿದಾಗುವ ಹಂತಕ್ಕೆ ತಲುಪಿದ್ದು ಈಗಾಗಲೇ ಈ ನದಿಯ ಹಲವೆಡೆ ನೀರಿನ ಹರಿವು ನಿಲುಗಡೆಯಾಗಿದೆ. ಇನ್ನೂ ಪಾಲಹಳ್ಳಿ, ಐಗೂರು ಹೊಳೆಗಳ ಹರಿವು ಕ್ರಮೇಣ ಕ್ಷೀಣಿಸಲಾರಂಭಿಸಿದೆ.

### ಅಧಿಕಾರಿಗಳ ನಿರ್ಲಕ್ಷ್ಯ

ಸಾರ್ವಜನಿಕ ಜಲ ಮೂಲಗಳಿಗೆ ಮೋಟಾರ್‌ಗಳಿಂದ ನೀರು ಹರಿಸುವುದನ್ನು ತಡೆಯುವ ಕೆಲಸ ಕಂದಾಯ ಇಲಾಖೆ ಗ್ರಾಮ ಲೆಕ್ಕಿಗರು ಹಾಗು ಕಂದಾಯ ನೀರಿಕ್ಷಕರದ್ದಾಗಿದೆ. ಆದರೆ, ಈ ವಿಚಾರ ಬಹುತೇಕ ಅಧಿಕಾರಿಗಳಿಗೆ ತಿಳಿದಿಲ್ಲ ಎಂಬುದು ಆಶ್ಚರ್ಯ ಹುಟ್ಟಿಸುತ್ತಿದೆ. ಅಧಿಕಾರಿಗಳ ಎದುರೇ ಕೆರೆ, ಹೊಳೆಗಳಿಂದ ಮೋಟಾರ್ ಇಟ್ಟು ನೀರು ಎತ್ತಲಾಗುತ್ತಿದೆ. ಹಿಂದೆ ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳು ಹಲವು ಬಾರಿ ದಾಳಿ ಮಾಡಿ ಸಾರ್ವಜನಿಕ ಜಲಮೂಲಗಳಿಗೆ ಇಟ್ಟಿದ್ದ ಮೋಟಾರ್‌ಗಳನ್ನು ಜಪ್ತಿ ಮಾಡಿದ ಘಟನೆಗಳು ನಡೆದಿವೆ. ಆದರೆ, ಪ್ರಸಕ್ತ ಇರುವ ಕಂದಾಯ ಇಲಾಖೆಯ ಅದಿಕಾರಿಗಳಿಗೆ ಈ ಬಗ್ಗೆ ಅರಿವೆ ಇಲ್ಲದಾಗಿದೆ. ಮತ್ತೊಂದೆಡೆ ಮಳೆಯಾಗದಿರುವುದು ಇಂಜಿನೀಯರಿಂಗ್ ಶಾಪ್‌ಗಳಿಗೆ ಹಾಗು ಮೆಕ್ಯಾನಿಕ್‌ಗಳಿಗೆ ಬೀಡುವಿಲ್ಲದ ದುಡಿಮೆ ನೀಡಿದೆ.

# ಅಧಿಕಾರಿಗಳಿಗೆ ರೇವಣ್ಣ ಮಾನಸಿಕ ಕಿರುಕುಳ

» ಮೊದಲನೇ ಪುಟದಿಂದ

ದಲ್ಲಿದ್ದಾಗ ಹಿಂದೆ ಏನೇನು ಮಾಡಿದ್ದಾರೆಂದು ಅವಲೋಕನ ಮಾಡಿಕೊಳ್ಳಲಿ. ಶಾಸಕರ ಹಕ್ಕಿಗೆ ಯಾವ ರೀತಿ ಧಕ್ಕೆಯಾಗಿದೆ ಎಂಬುದನ್ನು ಸತ್ಯಾಸತ್ಯತೆಯನ್ನು ಸಮಿತಿ ಅಧ್ಯಕ್ಷರು ತೀರ್ಮಾನ ಮಾಡುತ್ತಾರೆ. ಹಕ್ಕುಚ್ಯುತಿ ಮಂಡಿಸುವ ಮುನ್ನ ತಪ್ಪಾಗಿದೆಯೇ ಎಂದು ಆತ್ಮಾವಲೋಕ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಶಾಸಕರು ಅಸಹಾಯಕರು ಎಂಬ ಸಂದೇಶ ರವಾನೆ ಆಗಲಿದೆ. ನನ್ನ ಪ್ರಕಾರ ಯಾವುದೇ ಹಕ್ಕುಚ್ಯುತಿ ಆಗಿಲ್ಲ ಎಂದು ಸ್ಪಷ್ಟಪಡಿಸಿದರು.

**ವಾಣಿಜ್ಯ ಸಿಲಿಂಡರ್ ಲಭ್ಯತೆ ಇಲ್ಲ:** ಸದ್ಯ ಗೃಹಬಳಕೆ ಸಿಲಿಂಡರ್ ಸಮಸ್ಯೆ ಇಲ್ಲ. ಆದರೂ ಮುನ್ನೆಚ್ಚರಿಕೆಯಿಂದ ಮಿತವಾಗಿ ಬಳಸಿ, ವಾಣಿಜ್ಯ ಸಿಲಿಂಡರ್ ಲಭ್ಯತೆ ಇಲ್ಲ. ಈ ಬಗ್ಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಸೋಮವಾರ ಕೇಂದ್ರ ಸಚಿವರ ಗಮನ ಸೆಳೆಯುವೆ.

ಕೇಂದ್ರ ಸರ್ಕಾರ ವಾಣಿಜ್ಯ ಸಿಲಿಂಡರ್ ಸಮಸ್ಯೆ ಸರಿಪಡಿಸಬೇಕು. ಎಲ್‌ಪಿಜಿ ವಿಷಯದಲ್ಲಿ ರಾಜಕೀಯ ಮಾಡೋದು ಬೇಡ ಎಂದು ಮನವಿ ಮಾಡುವೆ. ಅದಕ್ಕೆಲ್ಲ ಕೇಂದ್ರದ ವೈಫಲ್ಯ ಕಾರಣ, ಮುಂಚೆಯೇ ಸಭೆ ಕರೆದು ಪೂರ್ವ ಸಿದ್ದತೆ ಮಾಡಿಕೊಳ್ಳಬೇಕಿತ್ತು. ಇನ್ನಾದರೂ ಎಚ್ಚೆತ್ತುಕೊಳ್ಳಲಿ ಎಂದು ಹೇಳಿದರು.

**ಅಪರಾಧ ತಡೆಗೆ ಕ್ರಮ**

ಜಿಲ್ಲೆಯಲ್ಲಿ ನಡೆಯುತ್ತಿರುವ ಗಾಂಜಾ ಮಾರಾಟ ಮತ್ತು ಮರಳು ದಂಧೆ ತಡೆಗೆ ಪೊಲೀಸ್ ಇಲಾಖೆಯೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. ಮರಳು ಅಕ್ರಮದಲ್ಲಿ ಪೊಲೀಸರು ಭಾಗಿಯಾಗಿದ್ದರೆ ಸಹಿಸುವುದಿಲ್ಲ. ಗಾಂಜಾ ಪತ್ತೆಗೆ ಹೆಚ್ಚಿನ ಮಟ್ಟದ ಪರಿ ಶೀಲನೆಗೆ ಮುಂದಾ ಗುವಂತೆ ತಿಳಿಸುವುದಾಗಿ ಹೇಳಿದರು.

# ಜಿಲ್ಲಾದ್ಯಂತ ರಂಜಾನ್ ಹಬ್ಬದ ಸಂಭ್ರಮ



» ಮೊದಲನೇ ಪುಟದಿಂದ

ವಿನಿಮಯ ಮಾಡಿಕೊಂಡು ಒಗ್ಗಟ್ಟಿನ ಸಂದೇಶ ಸಾರಿ ದ್ದಾರೆ. ಇಂತಹ ಸಂದರ್ಭಗಳು ಸಮಾಜದಲ್ಲಿ ಏಕತೆ, ಸಹಬಾಳ್ವೆ ಮತ್ತು ಪರಸ್ಪರ ಗೌರವ ಹೆಚ್ಚಿ ಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂದು ಸಮೀರ್ ಖಾನ್ ಹೇಳಿದರು. ಪೊಲೀಸ್ ಬಿಗಿ ಬಂದೋಬಸ್ತ್ ವಹಿಸಲಾಗಿತ್ತು.

**ಹೊಳೆನರಸೀಪುರದಲ್ಲಿ ರಂಜಾನ್**

ಹೊಳೆನರಸೀಪುರದ ಈದ್ಗಾ ಮೈದಾನದಲ್ಲಿ ಹಮ್ಮಿಕೊಂಡಿದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ತಾಳ್ಮೆ, ಶಿಸ್ತು ಮತ್ತು ಬಡವರ ಹಸಿವಿನ ಕಷ್ಟವನ್ನು ಎಲ್ಲರಿಗೂ ಪರಿಚಯಿಸುವ ಮತ್ತು ದಾನ ಧರ್ಮದ ಬಗ್ಗೆ ಅರಿವು ಮೂಡಿ ಸುವ ಪವಿತ್ರ ರಂಜಾನ್ ಹಬ್ಬ ಎಲ್ಲರಿಗೂ ಒಳಿತು ಮಾಡಲಿ ಎಂದು ಆಶಿಸಿದರು. ಸಮಾಜದಲ್ಲಿ ಶಾಂತಿ, ಸಹನೆ, ಸಹಿಷ್ಣುತೆ ಮತ್ತು ಸಮನ್ವಯ ಸಾಧಿಸಲು ಪವಿತ್ರ ರಂಜಾನ್ ಹಬ್ಬವು ಎಲ್ಲರಲ್ಲಿಯೂ ಪ್ರೇರಣೆ ನೀಡಲಿ ಎಂದು ಸಲಹೆ ನೀಡಿದರು.

ಮುಸ್ಲಿಂ ಸಮುದಾಯದ ವತಿಯಿಂದ ಸಂಸದರನ್ನು ಗೌರವಿಸಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯದ ಬಾಂಧವರು ಸೇರಿ ಪ್ರಾರ್ಥನೆ ನಡೆಸಿ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಮುಸ್ಲಿಂ ಧರ್ಮ ಗುರುಗಳು ಸೇರಿ ಮಜಾಹಿದ್, ಇದ್ರೀಸ್ ಮತ್ತಿತರರಿದ್ದರು.

# ಶಾಂತಿಗಾಗಿ ಮುಸ್ಲಿಮರ ಸಾಮೂಹಿಕ ಪ್ರಾರ್ಥನೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನಾದ್ಯಂತ ಶನಿವಾರ ಶ್ರದ್ಧಾ ಭಕ್ತಿಯೊಂದಿಗೆ ರಂಜಾನ್ ಹಬ್ಬ ಆಚರಿಸಲಾಯಿತು.

ಪಟ್ಟಣದ ಬಾಗೂರು ರಸ್ತೆಯಲ್ಲಿರುವ ಈದ್ಗಾ ಮೈದಾನದ ಆವರಣದಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ರಂಜಾನ್ ಕೊನೆಯ ದಿನದ ಅಂಗವಾಗಿ ಶಾಂತಿಗಾಗಿ ಪ್ರಾರ್ಥನೆ ಸಲ್ಲಿಸಿದರು. ಮುಸ್ಲಿಮರ ಪವಿತ್ರ ಮಾಸ ರಂಜಾನ್ ಶುಕ್ರವಾರ ಮುಗಿದಿದೆ. ಶನಿವಾರ ಶವ್ವಲ್ ಮೊದಲನೇ ದಿನದಂದು ಈದ್-ಉಲ್-ಫಿತರ್ (ರಂಜಾನ್) ಹಬ್ಬ ಆಚರಿಸಿದರು. ಬೆಳಿಗ್ಗೆಯಿಂದಲೇ ಈದ್ಗಾ ಮೈದಾನಕ್ಕೆ ತೆರಳಿದ ಬಾಂಧವರು, ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ವೃದ್ಧರಿಂದ ಹಿಡಿದು ಚಿಕ್ಕಮಕ್ಕಳು ಕೂಡ ಭಾಗವಹಿಸಿದ್ದರು. ಧರ್ಮ ಗುರುಗಳು ಹಬ್ಬದ ಸಂದೇಶ ಸಾರಿ, ದಾನ-ಧರ್ಮದ ಮಹತ್ವ ಕುರಿತು ಬೋಧನೆ ಮಾಡಿದರು. ಸಮಾಜದಲ್ಲಿ ಎಲ್ಲರೊಂದಿಗೂ ಸಹೋದರರಂತೆ ಬಾಳುವಂತೆ ಕರೆ ನೀಡಿದರು.

ಪ್ರಾರ್ಥನಾ ಸ್ಥಳದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್, ಚೌಕ್ ಮಸೀದಿ ಆಡಳಿತ ಅಧಿಕಾರಿಗಳಾದ ಶಮಿಲ್ ಪಾಷಾ, ಮುನೋಹರ್ ಪಾಷಾ, ಮುಖಂಡರಾದ ಝಬಿವುಲ್ಲಾ ಬೇಗ್, ಅಫ್ಸರ್ ಪಾಷಾ, ಸೈಯದ್ ಅಹ್ಮದ್, ಮುಕ್ತರ್ ಪಾಷಾ, ಚಾಂದ್ ಪಾಷಾ, ತಾನ್ವೀಮ್ ಪಾಷಾ, ಮಾಜಿ ಪುರಸಭಾ ಅಧ್ಯಕ್ಷ ಅನ್ಸಾರ್ ಬೇಗ್, ಕೆಡಿಪಿ ಸದಸ್ಯ ಮಹೇಶ್ ಕಬ್ಬಾಳು, ಬಾಲು ನಾಗಸಮುದ್ರ ಇತರರು ಇದ್ದರು.

# ಹೈನುಗಾರಿಕೆಯಲ್ಲಿ ಸ್ವಚ್ಛತೆಗೆ ನೆಲಹಾಸು ಅತ್ಯಗತ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರೈತರು ಕೊಟ್ಟಿಗೆಯಲ್ಲಿ ರಬ್ಬರ್ ನೆಲಹಾಸು (ಮ್ಯಾಟ್) ಅಳವಡಿಸುವು ದರಿಂದ ಸ್ವಚ್ಛತೆ, ಸಮತೋಲಿತ ಪೋಷಣೆ, ಕೆಚ್ಚಲಿನ ನೈರ್ಮಲ್ಯದೊಂದಿಗೆ ಹಸುಗಳ ಆರೋಗ್ಯ ರಕ್ಷಣೆ ಹಾಗು ಅಧಿಕ ಹಾಲು ಪಡೆಯ ಬಹುದಾಗಿದೆಂದು ಶಾಸಕ ಸಿ.ಎನ್ .ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಶೆಟ್ಟಿಹಳ್ಳಿ ಹಾಲು ಶಿತಲೀಕರಣ ಘಟಕದಲ್ಲಿ ಶನಿವಾರ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹಾಲು ಉತ್ಪಾದಕ ಸದಸ್ಯರಿಗೆ ರಬ್ಬರ್ ನೆಲಹಾಸು ವಿತರಿಸಿ ಮಾತನಾಡಿದ ಅವರು, ರೈತ ಸಮುದಾಯವು ತಮ್ಮ ಆರ್ಥಿಕತೆಯ ಪ್ರಮುಖ ಮೂಲವಾಗಿರುವ ಪಶು ಸಂಗೋಪನೆಯ ಉತ್ತಮ ಲಾಭ ಪಡೆಯ ಬೇಕಾದರೆ ರಾಸುಗಳ ಆರೋಗ್ಯ ಉತ್ತಮವಾಗಿರುವುದು ಕೂಡ ಮುಖ್ಯ. ಈ ನಿಟ್ಟಿನಲ್ಲಿ ದನ ಕರುಗಳು ವಾಸಿಸುವ ಜಾಗ ಸ್ವಚ್ಛವಾಗಿರುವುದು ಮುಖ್ಯವಾಗುತ್ತದೆ ಎಂದರು.

ಜಾನುವಾರುಗಳು ಮಲಗಿದ್ದಾಗ ಕೆಚ್ಚಲು ನೆಲದ ಸಂಪರ್ಕಕ್ಕೆ ಬರುತ್ತದೆ.



ಹೈನು ರಾಸುಗಳಲ್ಲಿ ಕೆಚ್ಚಲು ಬಾವು ಬರುವ ಸಾಧ್ಯತೆಗಳು ಹೆಚ್ಚಿರುತ್ತದೆ. ಅದರಿಂದ ಹಾಲಿನ ಉತ್ಪಾದನೆ ಗಣನೀ ಯವಾಗಿ ಇಳಿಮುಖವಾಗುತ್ತದೆ. ಹಸುವಿನ ಉತ್ಪಾದನಾ ಮಟ್ಟವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕಾದರೆ ನೆಲಹಾಸು ಮುಖ್ಯವಾಗಿದೆ ಎಂದು ಸಲಹೆ ನೀಡಿದರು.

ರಾಜ್ಯದಲ್ಲೇ ಹಾಲು ಉತ್ಪಾದನೆಯಲ್ಲಿ ಹಾಸನ ಹಾಲು ಒಕ್ಕೂಟ 2ನೇ ಸ್ಥಾನದಲ್ಲಿದೆ. ಚನ್ನರಾಯಪಟ್ಟಣ ತಾಲ್ಲೂಕು ರಾಜ್ಯಕ್ಕೆ 4ನೇ ಸ್ಥಾನ ಪಡೆದಿದೆ. ಡೈರಿ ಉದ್ಯಮದ ಬೆಳವಣಿಗೆಗೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಕೊಡುಗೆ ಅಪಾರವಾಗಿದೆ. ಜಿಲ್ಲೆಯ ರೈತರು ಆರ್ಥಿಕವಾಗಿ ಸದೃಢಗೊಳ್ಳಲು ಅವರ ದೂರ ದೃಷ್ಟಿಯೇ ಕಾರಣ. ಮುಂದಿನ ದಿನಗಳಲ್ಲಿ ಮೆಗಾ ಡೈರಿ ಉದ್ಘಾಟನೆಯಾಗಲಿದೆ ಎಂದರು.

ಹಾಸನ ಹಾಲು ಒಕ್ಕೂಟದ ಅಧ್ಯಕ್ಷ ಹೆಚ್.ಡಿ.ರೇವಣ್ಣನವರು ಮೂರು ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರಿ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸಿದ್ದು ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸಲಿದ್ದಾರೆ. ಈ ಬಗ್ಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರೊಂದಿಗೆ ಚರ್ಚಿಸಲಾಗಿದೆ ಎಂದು ಹೇಳಿದರು.

ತಾಲ್ಲೂಕಿನ 280 ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ 1.5 ಕೋಟಿ ರೂ. ವೆಚ್ಚದಲ್ಲಿ 6000 ರಬ್ಬರ್ ನೆಲಹಾಸು ವಿತರಿಸಲು ಕ್ರಮ ಕೈಗೊಂಡಿದ್ದು ತಾಲೂಕಿನಲ್ಲಿ ರಬ್ಬರ್ ನೆಲಹಾಸುಗಳ ಬೇಡಿಕೆ ಹೆಚ್ಚಾಗಿದ್ದು 20,000 ನೆಲ ಹಾಸುಗಳ ಅವಶ್ಯಕತೆ ಇದ್ದು, ಹಂತ ಹಂತವಾಗಿ ಬೇಡಿಕೆಗೆ ಅನುಗುಣವಾಗಿ ಎರಡನೇ ಹಂತದಲ್ಲಿ ವಿತರಣೆಗೆ ಕ್ರಮವಹಿಸಲಾಗುವುದು ಎಂದರು.

ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಜಾನುವಾರು ವಿಮಾ ಯೋಜನೆಯಲ್ಲಿ ಹಣ ಪಾವತಿಸಿದರೆ, ರೈತರ ಜಾನುವಾರುಗಳು ವಿಮೆ ವ್ಯಾಪ್ತಿಗೆ ಒಳಪಡಲಿದ್ದು, ಒಂದು ವೇಳೆ ಅವು ಆಕಸ್ಮಿಕವಾಗಿ ಮೃತಪಟ್ಟರೆ ಗರಿಷ್ಠ 50 ಸಾವಿರ ರೂ. ವರೆಗೆ ವಿಮಾ ಮೊತ್ತ ಪಾಲಕನ ಕೈಗೆ ದೊರೆಯಲಿದೆ. ಜಾನುವಾರು ಮಿಷನ್ ಯೋಜನೆಯ ಜಾನುವಾರು ವಿಮೆ ಕಾರ್ಯಕ್ರಮ, ರೋಗ ಅಥವಾ ಅಪಘಾತದಿಂದ ಜಾನುವಾರು ಸಾವಾಗುವ ಸಂಭವಿತ ನಷ್ಟದಿಂದ ಪಶು ಪಾಲಕರಿಗೆ ರಕ್ಷಣೆ ನೀಡುತ್ತದೆಂದು ಮಾಹಿತಿ ನೀಡಿದರು.

ಹಾಸನ ಹಾಲು ಒಕ್ಕೂಟದ ನಿರ್ದೇಶಕಿ ವಸಂತ ಶಿವಣ್ಣ, ಮುಖಂಡರಾದ ಶಿವಣ್ಣ, ವಳಗೇರಹಳ್ಳಿ ಮಂಜಣ್ಣ, ಹಾಲು ಶೀತಲೀಕರಣ ಘಟಕದ ಸಹಾಯಕ ವ್ಯವಸ್ಥಾಪಕ ಎಂ.ದಯಾನಂದ, ಸಿ.ಸಿ.ಯೋಗೀಶ್, ಟಿ.ಕೃಷ್ಣಮೂರ್ತಿ, ವಿಸ್ತರಣಾಧಿಕಾರಿಗಳಾದ ವಿದ್ಯಾ, ಪ್ರಶಾಂತ್ ಇದ್ದರು.

# ಮಾ. 24ಕ್ಕೆ ಸ್ಪಂದನ ಯೋಜನಾ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ನಗರದ ಗಂಧದ ಕೋಠಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾ.24ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಸ್ಪಂದನ ಯೋಜನಾ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಜನ ಕಲ್ಯಾಣ ರಿಸರ್ಚ್ ಮತ್ತು ಚಾರಿಟೆಬಲ್ ಟ್ರಸ್ಟ್, ಪರಿಪೂರ್ಣ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಸಮಾರಂಭ ನಡೆಯಲಿದ್ದು, ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸುವರು. ಸಾಧ್ಯ ಟ್ರಸ್ಟ್ ಸಂಸ್ಥಾಪಕಿ ಕೆ.ಟಿ. ಆರತಿ ಉದ್ಘಾಟನೆ ನೆರವೇರಿಸುವರು. ಪರಿಪೂರ್ಣ ಚಾರಿಟೆಬಲ್ ಟ್ರಸ್ಟ್‌ನ ಪ್ರೊ.ಹೆಚ್.ವಿ. ಲಕ್ಷ್ಮೀ ನಾರಾಯಣ ಅಧ್ಯಕ್ಷತೆ ವಹಿಸಲಿದ್ದಾರೆ.

ಜನಕಲ್ಯಾಣ ರಿಸರ್ಚ್ ಮತ್ತು ಚಾರಿ ಟೆಬಲ್ ಟ್ರಸ್ಟ್ ಅಧ್ಯಕ್ಷ ಬಿ.ವಿ. ಕರೀಗೌಡ, ಚರ್ಮ ರೋಗ ತಜ್ಞ ಡಾ||ಬಿ.ಸಿ. ರವಿಕುಮಾರ್, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಪ್ರೊ. ಡಿ.ಕೆ. ಮಂಜಯ್ಯ, ಡಾ||ಅಬ್ದುಲ್ ಬಷೀರ್, ಲೆಕ್ಕ ಪರಿ ಶೋಧಕ ಎಸ್.ಜಿ.ಶ್ರೀಧರ ಮತ್ತಿತರರು ಭಾಗವಹಿಸಲಿದ್ದಾರೆ.

# ಬಲಗೈ ಸಮುದಾಯದ ಹೋರಾಟ ದಿಕ್ಕು ತಪ್ಪಿಸುವ ಕೆಲಸ

• ಪ್ರಜೋದಯ ವರದಿ

**ಹಾಸನ:** ಒಳ ಮೀಸಲಾತಿ ಹೋರಾಟ ಸಂಬಂಧ ಕಾಂಗ್ರೆಸ್‌ನ ಕೆಲವರು ಬಲಗೈ ಸಮುದಾ ಯದ ಹೋರಾಟ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆಂದು ದಲಿತಪರ ಹೋರಾಟಗಾರರ ಒಕ್ಕೂಟದ ಮುಖಂಡ ದಿನೇಶ್ ಅವರು ಆರೋಪಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿರುವ ಮಲ್ಲಿಗೆವಾಳು ದ್ಯಾವಪ್ಪ, ಕೃಷ್ಣ ಕುಮಾರ್, ಹೊಳೆನರಸೀಪುರದ ಸೋಮಶೇಖರ್ ಎಂಬುವರು ಒಕ್ಕೂಟ ಮಾಡಿಕೊಂಡು ಮಾ.25 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಇದೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಜ್ಞಾನಪ್ರಕಾಶ ಸ್ವಾಮೀಜಿ ಹಾಗು ಸಕಲೇಶಪುರ ಪರಾಜಿತ ಅಭ್ಯರ್ಥಿ ಕಾಂಗ್ರೆಸ್‌ನ ಸಿದ್ದಯ್ಯ ಅವರನ್ನು ರಾಜ್ಯ ಹೋರಾಟ ಸಮಿತಿಯಲ್ಲಿ ಸೇರಿಸಿಕೊಂಡಿದ್ದಾರೆ. ಆದರೆ ಪ್ರತಿಭಟನಾ ಸಮಾವೇಶ ಮಾಡುತ್ತಿರುವುದು ಯಾರು ಎಂಬ ಗೊಂದಲ ಮನೆ ಮಾಡಿದೆ ಎಂದು ಅನುಮಾನ ವ್ಯಕ್ತಪಡಿಸಿದರು.

ಸರ್ಕಾರ ಮಾಡಿಸುತ್ತಿದೆಯೋ,




ಸರ್ಕಾರವನ್ನು ಪ್ರತಿನಿಧಿಸುತ್ತಿರುವ ದಲಿತ ಬಲಗೈ ಸಚಿವರು ಮಾಡಿಸುತ್ತಿದ್ದಾರೆಯೋ ಗೊತ್ತಿಲ್ಲ. ಇವರೇ ಸ್ವಯಂ ಘೋಷಿತವಾಗಿ ಸಮಿತಿ ಮಾಡಿಕೊಂಡು ಜಿಲ್ಲೆಯ ಕೆಲ ಹೋರಾಟಗಾರರನ್ನು ತಮ್ಮ ಜೊತೆ ಸೇರಿಸಿಕೊಂಡು ಸಮಾವೇಶ ಮಾಡಲು ಹೊರಟಿದ್ದಾರೆ. ಈ ನಡೆಯನ್ನು ನಾವು ಖಂಡಿಸುತ್ತೇವೆ. ಕಾರಣ ಅವರು ಬಲಗೈ ಸಮುದಾಯದ ಮುಖಂಡರನ್ನು ಆಹ್ವಾನಿಸಿ ಸಭೆ ಮಾಡದೆ ಏಕಾಏಕಿ ಬೆಂಗಳೂರಿಗೆ ಹೊರಟಿದ್ದಾರೆ. ಖರ್ಚು ವೆಚ್ಚದ ಲಕ್ಷಾಂತರ ಹಣವನ್ನು ತಾವೇ ಹಂಚಿಕೊಳ್ಳುವುದು ಅವರ ಹುನ್ನಾರ. ಈ ಬಗ್ಗೆ ಸ್ಪಷ್ಟನೆ ನೀಡಬೇಕು. ಕಾಂಗ್ರೆಸ್ ಪಕ್ಷದ ಸಖ್ಯ ಹೊಂದಿರುವವರನ್ನು ಸಮಿತಿಯಿಂದ ಹೊರ ಹಾಕಬೇಕು ಎಂದು ಒತ್ತಾಯಿಸಿದರು.

ಮುಖಂಡರಾದ ಚೌಡಳ್ಳಿ ಜಗದೀಶ್, ವಿಠ್ಠಲ್, ತಟ್ಟೆಕೆರೆ ಮಂಜುನಾಥ್, ದೇವರಾಜ್, ನಾಗರಾಜ್, ಶಿವಣ್ಣ ಇದ್ದರು.

# ಅಂತರ್ಜಲ ಸಂರಕ್ಷಣೆಗೆ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ

• ಪ್ರಜೋದಯ ವರದಿ

**ಅರಸೀಕೆರೆ:** ಅಂತರ್ಜಲ ಸಂರಕ್ಷಣೆಗಾಗಿ ಮಳೆಗಾಲದಲ್ಲಿ ಬಿದ್ದ ನೀರನ್ನು ಸೂಕ್ತ ಸ್ಥಳಗಳಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಮಾಡುವ ಮೂಲಕ ತಡೆ ಹಿಡಿಯುವ ಕೆಲಸ ಮಾಡಲಾಗುತ್ತಿದೆ ಎಂದು ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ಸಣ್ಣ ನೀರಾವರಿ ಇಲಾಖೆ ವತಿಯಿಂದ 75 ಲಕ್ಷ ರೂ. ವೆಚ್ಚದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಗೆ ಶನಿವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಜಾಗತಿಕ ತಾಪಮಾನದ ಪರಿಣಾಮ ಮಳೆಯಿಲ್ಲದೆ ಅಂತರ್ಜಲ ಮಟ್ಟ ಕುಸಿಯುತ್ತಿದೆ. ಇದು ಅರಸೀಕೆರೆಯಲ್ಲಿ ಮಾತ್ರವಲ್ಲ, ಬಹುತೇಕ ಕಡೆ ಅಂತರ್ಜಲ ಸಮಸ್ಯೆ ಕಾಡುತ್ತಿದೆ. ಹಾಗಾಗಿ ಮಳೆ ನೀರನ್ನು ಭೂಮಿಯಲ್ಲಿ ಇಂಗಿಸುವ ಕೆಲಸ ಮಾಡಲಾಗುತ್ತಿದೆ. ಇದರಿಂದ ರೈತರ ಕೊಳವೆ ಬಾವಿಗಳಲ್ಲಿ ವರ್ಷವಿಡೀ ನೀರು ಇದ್ದು ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುತ್ತದೆ ಎಂದರು.

ನಾನು ಶಾಸಕನಾದ ಮೇಲೆ ಇಂತಹ ಹಲವು ಚೆಕ್ ಡ್ಯಾಂ, ಬ್ರಿಡ್ಜ್ ಹಾಗು ಬ್ಯಾರೇಜ್‌ಗಳನ್ನು ನಿರ್ಮಿಸಿ



ದ್ದೇನೆ. ಆ ಮೂಲಕ ಅಂತರ್ಜಲ ವೃದ್ಧಿಗೆ ಕಾರಣಕರ್ತನಾಗಿದ್ದೇನೆ ಎಂಬ ಹೆಮ್ಮೆಯಿದೆ. ಎತ್ತಿನ ಹೊಳೆ ಯೋಜನೆಯಿಂದ ನಮ್ಮ ಭಾಗದ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ಅರಣ್ಯ ಇಲಾಖೆ ಅಡೆ-ತಡೆಯಿಂದ ವಿಳಂಬವಾಗಿತ್ತು. ಆದರೆ ಈಗ ಸಮಸ್ಯೆ ಬಗೆ ಹರಿದಿದ್ದು, ಮುಂದಿನ ದಿನಗಳಲ್ಲಿ ಕಾಮಗಾರಿ ಮುಗಿದು ನೀರು ಹರಿಯಲಿದೆ ಎಂದು ಹೇಳಿದರು.

ಎತ್ತಿನಹೊಳೆ ಯೋಜನೆಯಿಂದ ತಾಲ್ಲೂಕಿನ ಕೆರೆ ಕಟ್ಟೆಗಳಿಗೆ ನೀರು ಹರಿದರೆ ಜಾನುವಾರು, ಶುದ್ಧ ಕುಡಿಯುವ ನೀರಿನ ಬಗ್ಗೆ ಆಗಾಗ ತಲೆದೋರುವ ಸಮಸ್ಯೆಗಳು ಶಾಶ್ವತವಾಗಿ ನಿವಾರಣೆಯಾಗಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖಂಡರಾದ ಕೆಲ್ಲಂಗೆರೆ ಗುರುಮೂರ್ತಿ, ಕುಮಾರ, ಚನ್ನಬಸಪ್ಪ, ಚಿದಾನಂದ, ಯತೀಶ ನಾರಾಯಣ ಘಟ್ಟಹಳ್ಳಿಯ ಚಂದ್ರು ವಸಂತ, ರವಿ, ನಾಗೇನಹಳ್ಳಿ ದಯಾನಂದ, ಎ.ಇ.ಇ ಸುಂದರರಾಜ್, ಗುತ್ತಿಗೆದಾರ ಶ್ರೀನಿವಾಸ್ ಹಾಜರಿದ್ದರು.

# ಯುವ ಸಮಾಜ ರಾಷ್ಟ್ರ ಹಿತಕ್ಕಾಗಿ ಚಿಂತಿಸಬೇಕು

• ಪ್ರಜೋದಯ ವರದಿ

**ಹಾಸನ:** ಪ್ರಸ್ತುತ ದಿನಗಳಲ್ಲಿ ನಡೆಯುತ್ತಿರುವ ಜಾಗತಿಕ ವಿದ್ಯಮಾನಗಳು ಯುವಕರ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುತ್ತಿದ್ದು, ಸಕಾರಾತ್ಮಕ ಚಿಂತನೆ ಮೂಲಕ ರಾಷ್ಟ್ರ ಹಿತಕ್ಕಾಗಿ ಚಿಂತಿಸುವಂತಾಗಬೇಕೆಂದು ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾದ ಸ್ವಾಮಿ ಸ್ಮರಣಾನಂದ ಹೇಳಿದರು.

ನಗರದ ಶಂಕರೀಪುರಂನಲ್ಲಿರುವ ಯೋಗದಾ ಸತ್ಸಂಗ ಶಾಖೆಯಲ್ಲಿ ಶನಿವಾರ ಏರ್ಪಡಿಸಿದ್ದ ಗೃಹಾಧ್ಯಯನದ ಕ್ರಿಯಾ ಯೋಗ ಧ್ಯಾನ ಪಾಠಗಳ ಕನ್ನಡ ಆವೃತ್ತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ಜಗತ್ತು ಅನೇಕ ಸವಾಲು ಎದುರಿಸುತ್ತಿರುವುದು ಯುವಕರ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಜಾಗತಿಕ ಸಂಘರ್ಷ, ಆರ್ಥಿಕ ಅನಿಶ್ಚಿತತೆ, ವಿಶೇಷವಾಗಿ ಯುವಜನರಲ್ಲಿ ಹೆಚ್ಚುತ್ತಿರುವ ಒತ್ತಡ ಹಾಗು ಆತಂಕವನ್ನು ಧ್ಯಾನದ ನಿಯಮಿತ ಅಭ್ಯಾಸವು ದೂರ ಮಾಡುತ್ತದೆ ಎಂದರು.

1917ರಲ್ಲಿ ಪರಮಹಂಸ ಯೋಗಾನಂದರು ಸ್ಥಾಪಿಸಿದ ಸಂಸ್ಥೆ ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ ಸತ್ಸಂಗ ಕ್ರಿಯಾ ಯೋಗ ಪಾಠಗಳನ್ನು ಕನ್ನಡದಲ್ಲಿ ಪರಿಚಯಿಸಲಿದೆ.



ಪ್ರಾಚೀನ ಮತ್ತು ಕ್ರಿಯಾ ಯೋಗ, ಧ್ಯಾನ ಉಪದೇಶಗಳು ಮತ್ತು ಯೋಗದ ಸರ್ವ ಮಾನವೀಯ ತತ್ವಗಳು ಕನ್ನಡಭಾಷಿಕ ಆತ್ಮಸಾಧಕರಿಗೆ ಲಭ್ಯವಾಗಲಿದೆ ಎಂದರು.

ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ, ಶಾಂತಿ, ಆಂತರಿಕ ಭದ್ರತೆ ಮತ್ತು ಶಾಶ್ವತ ಸಂತೋಷವನ್ನು ಹುಡುಕುವ ಜನರಿಗೆ ಭಾರತದ ಅಮೂಲ್ಯ ಆಧ್ಯಾತ್ಮಿಕ ಜ್ಞಾನವನ್ನು ಹಂಚಿಕೊಂಡಿದೆ. ಪರಮಹಂಸ ಯೋಗಾನಂದರು ಬೋಧಿಸಿದ ಧ್ಯಾನದ ಸಮರ್ಪಕ ವಿಧಾನಗಳು ಮತ್ತು ಸಮತೋಲನಯುತ ಜೀವನದ ತತ್ವಗಳ ಮೂಲಕ, ಪ್ರಾಮಾಣಿಕ ಸಾಧಕರು ಕ್ರಮಬದ್ಧವಾಗಿ ಕ್ರಿಯಾ ಯೋಗ ಧ್ಯಾನದ ತಂತ್ರಗಳನ್ನು ಮನೆ ಮೂಲಕ ಅಧ್ಯಯನದ ಪತ್ರಾಚಾರ ಪಾಠ ಕ್ರಮವಾಗಿ ಕಲಿಯಬಹುದು ಎಂದರು.

# ಬಾಣಾವರದಲ್ಲಿ ಶ್ರದ್ಧಾಭಕ್ತಿಯಿಂದ ರಂಜಾನ್ ಆಚರಣೆ



• ಪ್ರಜೋದಯ ವರದಿ

**ಬಾಣಾವರ:** ಪಟ್ಟಣದಲ್ಲಿ ರಂಜಾನ್ ಹಬ್ಬವನ್ನು ಮುಸ್ಲಿಂ ಸಮುದಾಯದವರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ಮೊದಲು ಬಾಣಾವರ ಸುನ್ನಿ ಜಾಮಿಯಾ ಮಸೀದಿಯಿಂದ ಮೆರವಣಿಗೆ ಹೊರಟು ಅಲ್ಲಾಹನ ನಾಮ ಸ್ಮರಣೆ ಮಾಡುತ್ತ ಹುಳಿಯಾರು ರಸ್ತೆಯ ಮಾರ್ಗವಾಗಿ ಈದ್ಗಾ ಮೈದಾನ ತಲುಪಿ, ಸಾಮೂಹಿಕ ನಮಾಜ್ ಸಲ್ಲಿಸಿ ರಂಜಾನ್ ಹಬ್ಬವನ್ನು ಆಚರಿಸಿದರು.

ಉಪನ್ಯಾಸ ನೀಡಿದ ಮುಸ್ಲಿಂ ಧರ್ಮಗುರು ಸಲೀಮ್ ರಾಜಾ ಅವರು, ರಂಜಾನ್ ಹಬ್ಬವು ತ್ಯಾಗ, ಶಾಂತಿ ಹಾಗು ಪ್ರೀತಿ-ಸಹಬಾಳ್ವೆಯನ್ನು ಸಾರುವ ಹಬ್ಬವಾಗಿದೆ. ಮುಸ್ಲಿಂ ಬಂಧುಗಳು ಒಂದು ತಿಂಗಳು ಅಲ್ಲಾಹನ ಆಜ್ಞೆಯಂತೆ ಉಪವಾಸ ಆಚರಿಸಿ, ಸಮಗ್ರ ಸಮಾಜದ ಅಭಿವೃದ್ಧಿಗಾಗಿ ಪ್ರಾರ್ಥನೆ ಮಾಡಿ, ಸರ್ವರಿಗೂ ಒಳಿತಾಗಲಿ ಎಂದು ಏಕಾಗ್ರತೆಯಿಂದ ಬೇಡಿಕೊಳ್ಳುತ್ತಾರೆ ಎಂದರು.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಸಾರುವ ದೇಶವಾಗಿದ್ದು, ದೇಶದ ಏಕತೆ, ಸಮಗ್ರತೆ ಹಾಗು ಅಖಂಡತೆಯನ್ನು ಕಾಪಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಯುವಜನತೆ ದೇಶದ ಭವಿಷ್ಯದ ಪ್ರಜೆಗಳಾಗಿರುವುದರಿಂದ ದುಶ್ಚಟಗಳಿಂದ ದೂರವಿದ್ದು, ಉತ್ತಮ ಆರೋಗ್ಯ ಹಾಗೂ ಉತ್ತಮ ನಡವಳಿಕೆಯನ್ನು ಬೆಳೆಸಿಕೊಂಡು ಸದೃಢ ಭಾರತ ನಿರ್ಮಾಣಕ್ಕೆ ಕೈಜೋಡಿಸಬೇಕೆಂದು ತಿಳಿಸಿದರು.

ಪ್ರವಾದಿ ಮೊಹಮ್ಮದ್ ಅವರು ಸಾರಿ ಸಮಾಜದಲ್ಲಿ ಪ್ರತಿಯೊಬ್ಬರೂ ಶಾಂತಿ, ಸುಖ, ನೆಮ್ಮದಿಯಿಂದ ಬದುಕಬೇಕು. ನೆರೆಹೊರೆಯವ ರೊಂದಿಗೆ ಪರಸ್ಪರ ಪ್ರೀತಿ-ವಿಶ್ವಾಸ ದಿಂದ ಜೀವನ ಸಾಗಿಸಿ, ಇತರರ ಕಷ್ಟಗಳಲ್ಲಿ ಪಾಲ್ಗೊಂಡು ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಾಗ ಈ ದೇಶವನ್ನು ಯಾರಿಂದಲೂ ಅಲುಗಾಡಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಮುಸ್ಲಿಂ ಜಮಾತ್ ಕಮಿಟಿ ಅಧ್ಯಕ್ಷ ಸೈಯದ್ ರಹೀಂ, ಕಾರ್ಯದರ್ಶಿ ಶರಫಾನ್, ಖಜಾಂಚಿ ಶಬ್ಬೀರ್, ಪದಾಧಿಕಾರಿಗಳಾದ ಗೌಸ್‌ಪೀರ್, ಸಮಿಉಲ್ಲಾ, ಮನ್ಸೂರ್, ಇಮ್ರಾನ್, ವಸೀಮ್, ಪರ್ವೀಜ್, ಆದಿಲ್ ಉಪಸ್ಥಿತರಿದ್ದರು.

# ಇರಾನ್ ಮೇಲೆ ಅಮೇರಿಕಾ-ಇಸ್ರೇಲ್ ಜಂಟಿ ಕಾರ್ಯಾಚರಣೆ

• ಪ್ರಜೋದಯ ವರದಿ

**ಟೆಹ್ರಾನ್:** ಅಮೇರಿಕಾ ಹಾಗು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸುತ್ತಿರುವ ಭೀಕರ ವೈಮಾನಿಕ ದಾಳಿ ಮೂರನೇ ವಾರಕ್ಕೆ ಕಾಲಿಟ್ಟಿದ್ದು, ಶನಿವಾರ ಇರಾನ್‌ನ ನಟಾಂಜ್ ಪರಮಾಣು ಸ್ಥಾವರದ ಮೇಲೆ ದಾಳಿ ನಡೆಸಲಾಗಿದೆ.

ಬೆಳಿಗ್ಗೆ ನಟಾಂಜ್‌ನಲ್ಲಿರುವ ಇರಾನ್‌ನ ಪ್ರಮುಖ ಯುರೇನಿಯಂ-ಪುಷ್ಟೀಕರಣ ಸ್ಥಾವರದ ಮೇಲೆ ಅಮೇರಿಕಾ ಮತ್ತು ಇಸ್ರೇಲ್ ದಾಳಿ ನಡೆಸಿವೆ ಎಂದು ವರದಿ ತಿಳಿಸಿದೆ. ಇರಾನ್‌ನ ಅತ್ಯಂತ ಮಹತ್ವದ ಪರಮಾಣು ಸ್ಥಾವರಗಳಲ್ಲಿ ಒಂದಾದ ನಟಾಂಜ್ ಪರಮಾಣು ಸ್ಥಾವರವನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ ಎಂದು ತಸ್ನಿಮ್ ವರದಿ ಮಾಡಿದೆ.

ದಾಳಿಯ ನಂತರ ಯಾವುದೇ ವಿಕಿರಣ ಸೋರಿಕೆ ಪತ್ತೆಯಾಗಿಲ್ಲ ಮತ್ತು ಸ್ಥಾವರದ ಬಳಿ ವಾಸಿಸುವ ನಿವಾಸಿಗಳು ಅಪಾಯದಲ್ಲಿಲ್ಲ. ಆದಾಗ್ಯೂ ಸ್ಥಳೀಯ ನಿವಾಸಿಗಳು ವಿಕಿರಣ ಸೋರಿಕೆಯ ಆತಂಕದಲ್ಲಿದ್ದಾರೆ. ದಾಳಿಗೆ ಒಳಗಾದ ನಟಾಂಜ್ ಪರಮಾಣು ಸ್ಥಾವರ ಇರಾನ್ ರಾಜಧಾನಿ ಟೆಹ್ರಾನ್‌ನಿಂದ 220 ಕಿ.ಮೀ. ದೂರದಲ್ಲಿದೆ. ಇಸ್ರೇಲ್ ಮತ್ತು ಇರಾನ್ ನಡುವೆ ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ ನಟಾಂಜ್ ಸೌಲಭ್ಯವನ್ನು ಪದೇ ಪದೇ ಟಾರ್ಗೆಟ್ ಮಾಡಲಾಗುತ್ತಿದ್ದು, ಜೂನ್ 2025 ರ ಇಸ್ರೇಲ್-ಇರಾನ್ 12 ದಿನಗಳ ಯುದ್ಧದ ಸಮಯದಲ್ಲೂ ಇಸ್ರೇಲ್ ಪಡೆಗಳು ಇರಾನಿನ ಮಿಲಿಟರಿ ಮತ್ತು ಪರಮಾಣು ಮೂಲಸೌಕರ್ಯದ ಮೇಲೆ ಸರಣಿ ದಾಳಿ ನಡೆಸಿದ್ದವು.



**ಟ್ರಂಪ್‌ಗೆ ಆಘಾತ ನೀಡಲು ಇರಾನ್ ಶಪಥ**

ಪಶ್ಚಿಮ ಏಷ್ಯಾ ಮತ್ತು ಗಲ್ಫ್ ಪ್ರದೇಶದಲ್ಲಿ ಭದ್ರತಾ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳುತ್ತಿರುವಂತೆಯೇ, ಇರಾನ್ ವಿರುದ್ಧ ಯಾವುದೇ ಭೂ ದಾಳಿ ನಡೆಸಿದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಮಹಾ ಅಚ್ಚರಿ ಕಾದಿದೆ ಎಂದು ಇರಾನ್ ಶಪಥ ಮಾಡಿರುವುದಾಗಿ ತಸ್ನಿಮ್ ಸುದ್ದಿ ಸಂಸ್ಥೆ ಶನಿವಾರ ವರದಿ ಮಾಡಿದೆ.

ಇರಾನ್‌ನಲ್ಲಿ ಸಂಭವನೀಯ ಭೂ ಕಾರ್ಯಾಚರಣೆಗಳ ಬಗ್ಗೆ ಅಮೇರಿಕಾ ಸುಳಿವು ನೀಡಿ ರುವ ಇತ್ತೀಚಿನ ವರದಿಗಳಿಗೆ ಪ್ರತಿಕ್ರಿಯೆಯಾಗಿ ಇರಾನ್ ಮಿಲಿಟರಿ ಮೂಲಗಳು ಈ ಹೇಳಿಕೆ ನೀಡಿವೆ.

ಇರಾನಿನ ಇಂಧನ ಮೂಲಸೌಕರ್ಯದ ಮೇಲಿನ ದಾಳಿಯನ್ನು ಉಲ್ಲೇಖಿಸಿ, ನಮ್ಮ ಇಂಧನ ಮೂಲಸೌಕರ್ಯಕ್ಕೆ ಧಕ್ಕೆಯಾದಾಗ, ಈ ಪ್ರದೇಶದ ಎಲ್ಲಾ ಇಂಧನ ಮೂಲ ಸೌಕರ್ಯಗಳು ನಿಷ್ಕ್ರಿಯಗೊಂಡವು ಮತ್ತು ಈ ಬಾರಿಯೂ ಸಹ, ಭಯೋತ್ಪಾದಕ ಟ್ರಂಪ್, ಈ ವಿಷಯದಲ್ಲಿ ತಪ್ಪು ಮಾಡಿದರೆ, ನಮ್ಮ ಭೂಮಿಯಿಂದ ತನ್ನ ಸೈನಿಕರ ಶವ ಪೆಟ್ಟಿಗೆಯನ್ನು ತೆಗೆದುಹಾಕಲು ಸಾಧ್ಯವಾಗದ ರೀತಿಯಲ್ಲಿ ನಾವು ಆಘಾತವನ್ನುಂಟು ಮಾಡುತ್ತೇವೆಂದು ಎಚ್ಚರಿಸಿರುವುದಾಗಿ ತಿಳಿಸಿದೆ.

# ರಾಷ್ಟ್ರ ಮಟ್ಟದ ವಾಲಿಬಾಲ್ ಕ್ರೀಡಾಕೂಟಕ್ಕೆ ಆಯ್ಕೆ



**ಹಾಸನ:** ರಾಷ್ಟ್ರ ಮಟ್ಟದ ವಾಲಿಬಾಲ್ ಕ್ರೀಡಾಕೂಟಕ್ಕೆ ಜಿಲ್ಲೆಯ ಮಹಿಳಾ ಸರ್ಕಾರಿ ನೌಕರರ ತಂಡ ಆಯ್ಕೆಯಾಗಿದೆ.

ಈ ತಂಡದಲ್ಲಿ ಡಿ.ಇ.ರೂಪ, ರಾಜೇಶ್ವರಿ, ಸಿಂಧು, ಅಂಜಲಿ, ವಾಸಂತಿ, ಗೀತಾ, ಸವಿತಾ, ಸೌಮ್ಯ, ರೂಪ, ಹೆಚ್.ಎನ್. ಮಧು, ಸಿ.ಆರ್.ಮಧು, ನಾಗಮಣಿ ಮತ್ತು ವಾಣಿ ಇದ್ದಾರೆ. ರಮೇಶ್ ತರಬೇತುದಾರರಾಗಿದ್ದಾರೆ.

ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದು, ರಾಜ್ಯ ಮಟ್ಟದಲ್ಲಿ ವಿಜೇತರಾಗಿ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಲು ತೆರಳಿದ ತಂಡಕ್ಕೆ ಜಿಲ್ಲಾ ಸರ್ಕಾರಿ ಹಾಗು ನಿಗಮ ಮಂಡಳಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಅಭಿನಂದಿಸಿ ಟ್ರ್ಯಾಕ್‌ಸೂಟ್ ನೀಡಿ ಶುಭಕೋರಲಾಯಿತು. ಸಂಘದ ಅಧ್ಯಕ್ಷ ಕೆ.ಎಂ.ಶ್ರೀನಿವಾಸ್, ನಿರ್ದೇಶಕರಾದ ಯತೀಶ್, ಆರ್. ಸುರೇಶ್, ಪರಮೇಶ್, ವರುಣ್ ಕುಮಾರ್, ಶ್ರುತಿ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019